


# ಅನಂತಪಥ

ಪುಟ 2
ಶ್ರದ್ಧೆಯ ಶಿಲ್ಪ
ಬಸರಾಳು ಮಲ್ಲಿಕಾರ್ಜುನ ದೇಗುಲ



ಸಂಪುಟ - 5 ಡಿಸೆಂಬರ್ - 2024 ಸಂಚಿಕೆ - 54


# ಸೌಜನ್ಯಪೂರ್ಣ ರಾಜಕಾರಣ



ಕೋಟೆ ಪ್ರೌಢಶಾಲೆಯ ಆವರಣ. ರಾಮನವಮಿ ಸಂಗೀತೋತ್ಸವ. ಕುನ್ನಕುಡಿ ವೈದ್ಯನಾಥನ್ ಅವರ ಪಿಟೀಲು ವಾದನ. ಸಹಸ್ರಾರು ಸಂಗೀತ ಪ್ರೇಮಿಗಳು ಸೇರಿದ್ದರು. ಇದ್ದಕ್ಕಿದ್ದಂತೆ ಸ್ವಲ್ಪ ಗಲಿಬಿಲಿ. ಕಚೇರಿಗೆ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಬಂದಿದ್ದಾರೆ ಎಂದು ಗೊತ್ತಾಯಿತು. ಯಾವ ಹಿಂಬಾಲಕರಾಗಲಿ, ಜಯಕಾರಗಳಾಗಲಿ, ವಂದಿಮಾಗಧರಾಗಲಿ ಅವರ ಸಂಗಡ ಇರಲಿಲ್ಲ. ಕೃಷ್ಣ ಅವರು ಸಂಗೀತ ರಸಾಸ್ವಾದನಕ್ಕೆ ಯಾವುದೇ ತೊಂದರೆಯಾಗದಂತೆ ಬಂದು ಮೊದಲಸಾಲಿನಲ್ಲಿ ಪತ್ನಿ ಸಮೇತರಾಗಿ ಕುಳಿತರು. ಕುನ್ನಕುಡಿ ವೈದ್ಯನಾಥನ್ ಅವರು ಸಮಯೋಚಿತವಾಗಿ 'ಕೃಷ್ಣಾ ನೀ ಬೇಗನೆ ಬಾರೋ' ಕೀರ್ತನೆಯನ್ನು ನುಡಿಸಿದರು. ಶ್ರೋತೃಗಳಿಂದ ಚಪ್ಪಾಳೆಯ ಸುರಿಮಳೆ.

ಅದೇ ಸಮಯದಲ್ಲಿ ಕೇಂದ್ರ ಸರ್ಕಾರ ಸಚಿವರಾದ ಅನಂತಕುಮಾರ್ ಅವರು ಸಂಗೀತ ಕಛೇರಿಗೆ ಆಗಮಿಸಿದರು. ಅವರೂ ಕೂಡ ಒಬ್ಬ ಸಂಗೀತ ಪ್ರೇಮಿ. ಅವರ ಆಗಮನವೂ ಇದೇ ರೀತಿಯಲ್ಲಿ ಆಯಿತು. ಯಾವ ಒಡ್ಡೋಲಗವೂ ಇಲ್ಲದೆ ಸಾಮಾನ್ಯರಲ್ಲಿ ಸಾಮಾನ್ಯರಂತೆ ಅನಂತಕುಮಾರ್ ಅವರು ಬಂದಾಗ ಮುಖ್ಯ ಮಂತ್ರಿಗಳು ಎದ್ದುನಿಂತು ಸ್ವಾಗತಿಸಿದ್ದನ್ನು ನೆರೆದಿದ್ದ ಶ್ರೋತೃಗಳು ಕಣ್ಣಾರೆ ಕಂಡರು. ಅನಂತಕುಮಾರರೂ ಅಷ್ಟೇ ಸೌಜನ್ಯದಿಂದ ಪ್ರತಿಕ್ರಿಯಿಸಿ ಕೃಷ್ಣ ಅವರ ಪಕ್ಕದ ಕುರ್ಚಿಯಲ್ಲಿ ಕೂರಲು ಅನುವಾದರು. ಆಗ ತಾನೆ ಸಣ್ಣ ಮಳೆಯಾಗಿತ್ತು. ಅ ಕುರ್ಚಿ ಮಳೆಯಿಂದಾಗಿ ಸ್ವಲ್ಪ ಕೊಳೆಯಾಗಿತ್ತು. ಸಂಘಟಕರು ಬಂದು ಕುರ್ಚಿಯನ್ನು ಸರಿಪಡಿಸುವುದರೊಳಗೆ ಕೃಷ್ಣ ತಾವು ಹೊದ್ದಿದ್ದ ಉತ್ತರೀಯದಿಂದಲೇ ಕುರ್ಚಿಯನ್ನು ಒರೆಸಿ ಅನಂತಕುಮಾರರನ್ನು ಪಕ್ಕದಲ್ಲಿ ಕೂರಿಸಿಕೊಂಡರು. ಇಬ್ಬರು ಸಭ್ಯ ರಾಜಕಾರಣಿಗಳ ನಡೆವಳಿಕೆ ಎಲ್ಲರ ಮನ ಗೆದ್ದಿತ್ತು. ಅದರ ಹಿಂದಿನ ದಿನವೇ ಸಾರ್ವಜನಿಕ ಸಮಾರಂಭವೊಂದರಲ್ಲಿ ಅನಂತಕುಮಾರ್ ಕೃಷ್ಣರ ಸರಕಾರವನ್ನು ಸಾತ್ವಿಕತೆಯಿಂದಲೇ ಟೀಕಿಸಿದ್ದುದನ್ನು ಅನಂತಕುಮಾರರೇ ಮುಂದೊಮ್ಮೆ ಹೇಳಿದ್ದರು. ಇಂದಿನ ಕಲುಷಿತ ರಾಜಕಾರಣದ ವಾತಾವರಣದಲ್ಲಿ ಇಬ್ಬರು ಪರಸ್ಪರ ವಿರೋಧಿ ನಾಯಕರ ನಡುವಿನ ಇಂತಹ ಸೌಹಾರ್ದತೆಯನ್ನು ಊಹಿಸಿಕೊಳ್ಳುವುದೂ ಕಷ್ಟ. ಎರಡು ಪರ್ವತೋಪಮ ವ್ಯಕ್ತಿತ್ವಗಳ ಸಂಗಮಕ್ಕೆ ಅಂದಿನ ಸಂಗೀತ ಕಚೇರಿ ಸಾಕ್ಷಿಯಾಗಿತ್ತು.

2003, ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನಮಂತ್ರಿಗಳು. ತಮಿಳುನಾಡಿನ ಮುಖ್ಯಮಂತ್ರಿಯಾಗಿದ್ದವರು, ಆಗ ಬಿಜೆಪಿಯ ಮಿತ್ರಪಕ್ಷವಾಗಿದ್ದ ಎಡಿಎಂಕೆ ನಾಯಕಿ ಜಯಲಲಿತಾ ಅವರು. ಕಾವೇರಿ ನದಿಯ ನೀರಿನ ಹಂಚಿಕೆ ವಿಷಯದಲ್ಲಿ ಕೇಂದ್ರ ಸರಕಾರ ತಮ್ಮ ಪರವಾಗಿ ನಿಲ್ಲಬೇಕೆಂಬುದು ಅವರ ಒತ್ತಾಯವಾಗಿತ್ತು. ಆಗ ನಿಜವಾದ ಸಮಸ್ಯೆ ಎದುರಾದದ್ದು ಕೇಂದ್ರಮಂತ್ರಿಯಾಗಿದ್ದ ಅನಂತಕುಮಾರ್ ಅವರಿಗೆ. ಮಿತ್ರಪಕ್ಷದ ಒತ್ತಾಯ ಮತ್ತು ತನ್ನ ರಾಜ್ಯದ ಹಿತ ಇವೆರಡರ ನಡುವಿನ ಸಂದಿಗ್ಧದಲ್ಲಿದ್ದ ಅನಂತಕುಮಾರ್ ಬಹು ಚಾಕಚಕ್ಯತೆಯಿಂದ ಪರಿಸ್ಥಿತಿಯನ್ನು ನಿಭಾಯಿಸಿ ಕರ್ನಾಟಕಕ್ಕೆ ತೊಂದರೆಯಾಗಬಹುದಾಗಿದ್ದ ಪ್ರತ್ಯೇಕ ಕಾವೇರಿ ನ್ಯಾಯಾಧಿಕರಣದ ಸ್ಥಾಪನೆ ಆಗದಂತೆ ನೋಡಿಕೊಂಡು ಕರ್ನಾಟಕದ ಹಿತವನ್ನು ರಕ್ಷಿಸಿದರು. (ಪುಟ 4 ರಲ್ಲಿ ಮುಂದುವರಿದಿದೆ)

# ಗ್ರಾಮವಾಸಿಗಳ ಆರೋಗ್ಯ ತುರ್ತುಸೇವೆಗೆ ಕಕ್ಕಿಂಜೆ ಆಸ್ಪತ್ರೆ ದೇಶಕ್ಕೆ ಮಾದರಿ

**-ತೇಜಸ್ವಿನಿ ಅನಂತಕುಮಾರ್**



ಬೆಳ್ತಂಗಡಿ ತಾಲೂಕಿನ ಕಕ್ಕಿಂಜೆಯ ಶ್ರೀ ಕೃಷ್ಣ ಆಸ್ಪತ್ರೆಯ ಮಣಿಪಾಲ್ ಆಸ್ಪತ್ರೆಯ ಸಹಯೋಗದಿಂದ ಸ್ಥಾಪಿಸಿರುವ ತುರ್ತುಚಿಕಿತ್ಸಾ ಕೇಂದ್ರವನ್ನು 7-12-2024 ರಂದು ಉದ್ಘಾಟಿಸಿ ಮಾತನಾಡಿದ ಅದಮ್ಯ ಚೇತನದ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೇವೆ ನೀಡುತ್ತಿರುವ ಶ್ರೀ ಕೃಷ್ಣ ಆಸ್ಪತ್ರೆಯ ಕಾರ್ಯವನ್ನು ಪ್ರಶಂಸಿಸಿದರು. "ವೆಂಟಿಲೇಟರ್ ಸಹಿತ ಆಧುನಿಕ ವೈದ್ಯಕೀಯ ಉಪಕರಣಗಳು, 20 ಬೆಡ್‌ಗಳು, ನುರಿತ ಸಮರ್ಥ ವೈದ್ಯರ ತಂಡ ಇಷ್ಟೆಲ್ಲ ಸೌಲಭ್ಯವಿರುವ ಸುಸಜ್ಜಿತ ಆಸ್ಪತ್ರೆಯೊಂದು ಪಶ್ಚಿಮ ಘಟ್ಟದ ಕಿರುಗ್ರಾಮ ಕಕ್ಕಿಂಜೆಯಲ್ಲಿ ಲಭ್ಯವಿದೆ ಎನ್ನುವುದೇ ಅಚ್ಚರಿಯ ಸಂಗತಿ" ಎಂದು ಹೇಳಿದ ತೇಜಸ್ವಿನಿ ಅವರು "ದೆಹಲಿಯಲ್ಲಿ ಕಳಪೆ ವಾಯು ಗುಣಮಟ್ಟದಿಂದಾಗಿ ಹವಾನಿಯಂತ್ರಕಗಳೊಂದಿಗೆ ವಾಯು ಶುದ್ಧೀಕರಣಗಳನ್ನೂ ಬಳಸುತ್ತಿರುವುದು ಸಾಮಾನ್ಯವಾಗಿವೆ. ಉಸಿರಾಡಲು ಶುದ್ಧವಾದ ಗಾಳಿ ಸಿಗುತ್ತಿಲ್ಲ. ಯಾವುದೇ ಸಂದರ್ಭದಲ್ಲೂ ಇಂತಹ ಪರಿಸ್ಥಿತಿ ಪುನರಾವರ್ತನೆಯಾಗಬಾರದು.ಅದಕ್ಕಾಗಿ ನಾವು ನಮ್ಮ ಜೀವನಶೈಲಿಯಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳುವ ಮೂಲಕ ಹವಾಮಾನ ಬದಲಾವಣೆಯಂತಹ ಹಲವಾರು ಪರಿಸರ ಸವಾಲುಗಳನ್ನು ನಿಭಾಯಿಸಬಹುದು. ಪಶ್ಚಿಮ ಘಟ್ಟಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಎಸೆಯುತ್ತಿರುವುದರಿಂದ ಅದು ಅಂತಿಮವಾಗಿ ಮೈಕ್ರೋಪ್ಲಾಸ್ಟಿಕ್ ಆಗಿ ಪರಿವರ್ತನೆಯಾಗುತ್ತಿದೆ.. (ಪುಟ 4 ರಲ್ಲಿ ಮುಂದುವರಿದಿದೆ)

## ಹುಬ್ಬಳ್ಳಿ ಯಲ್ಲಿ ನಡೆದ ಗ್ರಾಮ ಚೇತನ




(ವರದಿ: ಪುಟ 10)

# ಬಸರಾಳು ಮಲ್ಲಿಕಾರ್ಜುನ ದೇಗುಲ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್



ಹೊಯ್ಸಳ ವಾಸ್ತುಶಿಲ್ಪದ ಅಪ್ರತಿಮ ನಿದರ್ಶನಗಳಾದ ಬೇಲೂರು, ಹಳೇಬೀಡು ಹಾಗೂ ಸೋಮನಾಥಪುರಗಳನ್ನು ಹೊರತುಪಡಿಸಿದಂತೆ ಶ್ರೇಷ್ಠ ಶಿಲ್ಪಕಲಾಮಾದರಿಗಳನ್ನು ಪ್ರದರ್ಶಿಸುವ ದೇವಾಲಯಗಳ ಪೈಕಿ ಮಂಡ್ಯ ಜಿಲ್ಲೆಯ ಬಸರಾಳು ಗ್ರಾಮದ ಮಲ್ಲಿಕಾರ್ಜುನ ದೇಗುಲವು ಪ್ರಮುಖಸ್ಥಾನ ಪಡೆಯುತ್ತದೆ.

ಬಸರಾಳಿನ ಪೂರ್ವದ ಸ್ಥಳನಾಮ ಬಸರಿವಾಳು. ಸಾ. ಶ. 1234ರಲ್ಲಿ ಇಲ್ಲಿನ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಲಾಯಿತು. ಈ ದೇವಾಲಯದ ನಿರ್ಮಾತೃ ಹರಿಹರದಂಡನಾಯಕ. ಈತನು ಹದಿಮೂರನೆಯ ಶತಮಾನದ ಆದಿಭಾಗದಲ್ಲಿ ಹೊಯ್ಸಳ ಅರಸನಾಗಿದ್ದ ಎರಡನೆಯ ನರಸಿಂಹನ ದಂಡನಾಯಕನಾಗಿದ್ದ. ತನ್ನ ಅರಸನ ಆಣತಿಯಂತೆ ಸೇವುಣರ ಮೇಲೆ ದಂಡೆತ್ತಿಹೋಗಿ ವಿಜಯ ಸಾಧಿಸಿದ. ಈ ವಿಜಯದ ನೆನಪಿಗಾಗಿ ತನ್ನ ಹುಟ್ಟೂರಾದ ಬಸರಿವಾಳ ಗ್ರಾಮದಲ್ಲಿ ದೇಗುಲವನ್ನು ಕಟ್ಟಿಸಿ ಮಲ್ಲಿಕಾರ್ಜುನ ಲಿಂಗವನ್ನು ಸ್ಥಾಪಿಸಿದ. ಹರಿಹರದಂಡನಾಯಕನು ತನ್ನ ತಂದೆ ಮಲ್ಲೆಯನಾಯಕನ ಹೆಸರಿನಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನೂ ತಾಯಿ ಗುಜ್ಜವ್ವೆಯ ಹೆಸರಿನಲ್ಲಿ ವಿಶಾಲವಾದ ಕೆರೆಯೊಂದನ್ನೂ ನಿರ್ಮಿಸಿ ದೇಗುಲಕ್ಕೆ ಅಗತ್ಯವಾದ ದತ್ತಿಗಳನ್ನು ಒದಗಿಸಿದನೆಂದು ಶಾಸನಗಳು ವರ್ಣಿಸುತ್ತವೆ.



ದೇವಾಲಯವು ಮೂರು ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿತವಾಗಿದೆ. ಕೆಳಮೆಟ್ಟಲುಗಳ ಇಕ್ಕೆಲದಲ್ಲಿ ಶಿಖರವುಳ್ಳ ದೇವಕೋಷ್ಠಗಳೂ ಬಾಗಿಲ ಅಕ್ಕಪಕ್ಕದ ಗಜಶಿಲ್ಪಗಳೂ ಆಕರ್ಷಕವಾಗಿವೆ. ದ್ವಾರಪಾಲಕರಲ್ಲಿ ಒಂದು ವಿಗ್ರಹ ಮಾತ್ರವೇ ಉಳಿದುಕೊಂಡಿದೆ. ಒಳಗೆ ಪ್ರವೇಶಿಸುತ್ತಿದ್ದಂತೆಯೇ ಕಕ್ಷಾಸನ ಮಂಟಪವನ್ನು ಕಾಣಬಹುದು. ಇಲ್ಲಿಂದ ಮುಂದಿನ ಮಂಟಪ, ನವರಂಗ, ಅಂತರಾಳಗಳಲ್ಲಿ ಹಲವಾರು ವಿಶಿಷ್ಟ ಶಿಲ್ಪಗಳನ್ನು ಇರಿಸಲಾಗಿದೆ. ಅವುಗಳಲ್ಲಿ ಮುಖ್ಯವಾಗಿ ಸೂರ್ಯ, ಸರಸ್ವತಿ, ಗಣಪತಿ, ಸಪ್ತಮಾತೃಕೆಯರು, ಮಹಿಷಮರ್ದಿನಿ ಹಾಗೂ ನಾಗನಾಗಿಣಿಯರ ಶಿಲ್ಪಗಳಿದ್ದು ಎಲ್ಲವೂ ಹೊಯ್ಸಳ ಶೈಲಿಯ ಅತ್ಯುತ್ತಮ ಕಲಾಕೃತಿಗಳಾಗಿವೆ. ಹೊರಮಂಟಪದಲ್ಲಿ ಇರಿಸಿರುವ ನಂದಿಯ ವಿಗ್ರಹವೂ ಸೂಕ್ಷ್ಮ ಕುಸುರಿಕೆತ್ತನೆಯ ಭೂಷಣಗಳಿಂದ ಅಲಂಕೃತವಾಗಿದೆ. ನವರಂಗದ ಮಂಟಪದಲ್ಲಿ ಒಂಬತ್ತು ಭುವನೇಶ್ವರಿಗಳಿದ್ದು ಎಲ್ಲವೂ ವಿಶಿಷ್ಟವಾದ ಚಿತ್ರವಿನ್ಯಾಸದಿಂದ ಗಮನಸೆಳೆಯುತ್ತವೆ. ಕಟ್ಟಡದ ಸುತ್ತಲೂ ಜಾಲಂದ್ರ ಎಂದರೆ ಕಿಟಕಿಗಳನ್ನು ಇರಿಸಲಾಗಿದ್ದು ಒಳಗುಡಿ, ಮಂಟಪಗಳಿಗೆ ಗಾಳಿ, ಬೆಳಕು ಒದಗುವಂತೆ ವ್ಯವಸ್ಥೆ ಕಲ್ಪಿಸಲಾಗಿದೆ. ದೇವಾಲಯದ ಒಳಗೆ ಹೇಗೋ ಹೊರಗೂ ಅಷ್ಟೇ ಸೊಬಗು. ಕೆಳಗೋಡೆಯ ಮೇಲೆ ಆರು ಪಟ್ಟಿಕೆಗಳ ಅಲಂಕರಣ. ಕೆಳಗಿನಿಂದ ಅನುಕ್ರಮವಾಗಿ ಆನೆ, ಕುದುರೆ, ಯಾಳಿಗಳ ಸಾಲು, ನಾಲ್ಕನೆಯ ಪಟ್ಟಿಯಲ್ಲಿ ರಾಮಾಯಣ, ಮಹಾಭಾರತ ಮತ್ತಿತರ ಪುರಾಣಕಥಾನಕಗಳ ದೃಶ್ಯಾವಳಿ, ಮೇಲಿನೆರಡು ಸಾಲುಗಳಲ್ಲಿ ಹೂಬಳ್ಳಿ ಹಾಗೂ ಹಂಸಗಳ ಸಾಲು. ಲಕ್ಷ್ಮೀನಾರಾಯಣ, ಕಾಳಿಂಗಮರ್ದನ ಕೃಷ್ಣ, ಶಿವಪಾರ್ವತಿಯರು, ನರಸಿಂಹ, ವಿಷ್ಣುವಿನ ವಿವಿಧ ರೂಪಗಳು, ಕಾಲಭೈರವ, ಗಜಾಸುರಮರ್ದನ, ದಕ್ಷಿಣಾಮೂರ್ತಿ ಮೊದಲಾದ ಶಿವನ ಲೀಲಾಮೂರ್ತಿಗಳು, ದುರ್ಗೆ, ಗೋವರ್ಧನಧಾರಿ ಕೃಷ್ಣ, ರತಿಮನ್ಮಥ, ಬ್ರಹ್ಮ, ವಾಮನ, ಬ್ರಹ್ಮ, ಸರಸ್ವತಿ ಮೊದಲಾದ ದೇವಶಿಲ್ಪಗಳನ್ನು ದೇವಾಲಯದ ಸುತ್ತಲಿನ ಗೋಡೆಗಳ ಮೇಲೆ ನೋಡಬಹುದು. ವಾಮನ ತ್ರಿವಿಕ್ರಮನಾದುದು, ರಾವಣ ಕೈಲಾಸವನ್ನು ಎತ್ತಲು ಪ್ರಯತ್ನಿಸುವುದು, ಮತ್ಸ್ಯಯಂತ್ರ ಭೇದನ ಮತ್ತಿತರ ಪ್ರಸಂಗಗಳ ನಿರೂಪಣೆಯೂ ಇಲ್ಲಿನ ಶಿಲ್ಪಗಳಲ್ಲುಂಟು. ಪರಿವಾರ ದೇವತೆಗಳು, ನರ್ತಕರು, ವಾದ್ಯಗಾರರು, ವಿಷಕನ್ಯೆ ಮೊದಲಾದವರೂ ಇಲ್ಲಿನ ಭಿತ್ತಿಶಿಲ್ಪಗಳಲ್ಲಿ ಸ್ಥಾನಪಡೆದಿದ್ದಾರೆ.

ನಾಲ್ಕು ಸ್ತರಗಳ ಶಿಖರದ ಮೇಲೂ ಹಲವು ದೇವತಾಮೂರ್ತಿಗಳನ್ನು ಕಾಣಬಹುದು. ಮೇಲೆ ಮೊಗುಚಿದ ಕಮಲವನ್ನು ಹೋಲುವ ವೇದಿ ಹಾಗೂ ಅದರ ಮೇಲಿನ ಕಲಶ ಅತ್ಯಾಕರ್ಷಕ. ಶಿಖರದ ಮುಂದಿನ ಸುಕನಾಸಿಯ ಮೇಲೆ ಹೊಯ್ಸಳ ಲಾಂಛನ - ಹುಲಿಯೊಡನೆ ಸೆಣಸುತ್ತಿರುವ ಸಳನ ಶಿಲ್ಪವಿದೆ.

ದೇವಾಲಯದ ಪಕ್ಕದಲ್ಲೇ ಇಪ್ಪತ್ತು ಅಡಿ ಎತ್ತರದ ಕಂಬ. ಮೇಲೆ ಎರಡು ಮಾನವಶಿಲ್ಪಗಳಿವೆ. ಇವು ಹೊಯ್ಸಳ ಅರಸರ ಅಂಗರಕ್ಷಕರಾಗಿದ್ದ ಗರುಡರೆಂಬ ಪಡೆಯ ಶ್ರದ್ಧಾವಂತ ಸೈನಿಕರ ಬಲಿದಾನವನ್ನು ಸೂಚಿಸುವ ವಿಶೇಷ ಸ್ಮಾರಕಗಳು.

ಬಸರಾಳಿಗೆ ಬರುವವರು ಸನಿಹದ ಸಂತೆಬಾಚಹಳ್ಳಿ, ಅಘಲಯ ಮೊದಲಾದ ಸ್ಥಳಗಳಿಗೂ ಭೇಟಿನೀಡಿ ಅಲ್ಲಿನ ಪುರಾತನ ದೇಗುಲಗಳನ್ನು ವೀಕ್ಷಿಸಲು ಅವಕಾಶ ಕಲ್ಪಿಸಿಕೊಳ್ಳಿ. **ಸೌಜನ್ಯ : ಆಕಾಶವಾಣಿ, ಮೈಸೂರು**

◆







ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಹೋರಾಟಕ್ಕೊಂದು ಭೂಗತ ಕೇಂದ್ರ

ಅಧ್ಯಾಯ-29

ಸಂಪೂರ್ಣಕ್ರಾಂತಿಗೆ ಕರೆನೀಡಿದ ಜಯಪ್ರಕಾಶ ನಾರಾಯಣರು ಸ್ವತಃ ಹುಬ್ಬಳ್ಳಿಗೆ ಬರುತ್ತಾರೆಂದು ತಿಳಿದಾಗ ಊರಿಗೆಲ್ಲ ಸಂಭ್ರಮ. ಅವರ ಆಗಮನದ ಕಾಲಕ್ಕೆ ಬೇಕಾದ ಸಿದ್ಧತೆಗಳಿಗಾಗಿ ರಚಿತವಾದ ಸ್ವಾಗತ ಸಮಿತಿಯಲ್ಲಿ ಗಿರಿಜಾ ಶಾಸ್ತ್ರಿಯವರೂ ಇದ್ದರು. ಸಂಪೂರ್ಣ ಕ್ರಾಂತಿಯನ್ನು ಕುರಿತಂತೆ ಶಾಸ್ತ್ರಿಯವರ ಮನೆಯಲ್ಲೇ ಹಲವರು ಸೇರಿ ಮಾತುಕತೆ ನಡೆಸುತ್ತಿದ್ದುದುಂಟು. ಅಂದಿನ ಸನ್ನಿವೇಶದ ಮಹತ್ವ, ಹಿನ್ನೆಲೆಗಳನ್ನು ಅರಿತುಕೊಳ್ಳಲು ಅನಂತಕುಮಾರನಿಗೆ ಇವೆಲ್ಲ ನೆರವಿಗೆ ಒದಗಿದವು.

ತಾನು ಓದಿ, ಕೇಳಿ ತಿಳಿದುಕೊಂಡುದನ್ನು ಅನಂತಕುಮಾರ ಸಮರ್ಥವಾಗಿ ಬಳಸಿಕೊಂಡ. ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಬೀದಿಗಳಲ್ಲಿ ನಡೆಯುವ ಸಭೆಗಳಲ್ಲಿ ಸಂಪೂರ್ಣ ಕ್ರಾಂತಿಯ ಹಿನ್ನೆಲೆ, ದೇಶದ ಸ್ಥಿತಿಗತಿ, ಗಫೂರ್, ಚಿಮಣ್ ಭಾಯ್ ಮೊದಲಾದ ನಾಯಕರ ಭ್ರಷ್ಟಾಚಾರ, ಇಂದಿರಾ ವಿರುದ್ಧ ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪಿನ ಮುಖ್ಯಾಂಶಗಳೆಲ್ಲವನ್ನೂ ಭಾಷಣರೂಪದಲ್ಲಿ ಅನಂತಕುಮಾರ್ ಸಮರ್ಥವಾಗಿ ಮಂಡಿಸಬಲ್ಲವನಾಗಿದ್ದ. ತನ್ನ ಜೊತೆಯ ವಿದ್ಯಾರ್ಥಿಗಳಿಗಿಂತ ಮಿಗಿಲಾಗಿದ್ದ ಗ್ರಹಣಶಕ್ತಿ ಮತ್ತು ನಿರೂಪಣಾಸಾಮರ್ಥ್ಯಗಳೇ ಅನಂತಕುಮಾರನಲ್ಲಿ ನಾಯಕತ್ವದ ಲಕ್ಷಣಗಳನ್ನು ಬಿಂಬಿಸತೊಡಗಿದವು.

1975 ಏಪ್ರಿಲ್ ತಿಂಗಳಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆ ಮುಗಿಸಿದ ಅನಂತಕುಮಾರ ತನ್ನ ಗೆಳೆಯರೊಡನೆ ಹುಬ್ಬಳ್ಳಿಯ ಯಾವ ಭಾಗದಲ್ಲಿ ಆಂದೋಲನದ ಚಟುವಟಿಕೆ ನಡೆದರೂ ಹೋಗಿ ಭಾಗವಹಿಸುತ್ತಿದ್ದ. ಜಯಪ್ರಕಾಶ ನಾರಾಯಣರು ಹುಬ್ಬಳ್ಳಿಗೆ ಬಂದು ದುರ್ಗದಬೈಲಿನಲ್ಲಿ ಮಾಡಿದ ಭಾಷಣದಲ್ಲಿ ದೊಡ್ಡ ಜನಜಾತ್ರೆಯೇ ನೆರೆದಿತ್ತು. ಆ ಗುಂಪಿನಲ್ಲಿ ಅನಂತಕುಮಾರನ ಗೆಳೆಯರ ಬಳಗವೂ ಸೇರಿತ್ತೆಂದು ಬೇರೆ ಹೇಳಬೇಕಾಗಿಲ್ಲ.

1975 ಜೂನ್ 25 ರ ರಾತ್ರಿ. ಇಂದಿರಾಗಾಂಧಿ ದೇಶಾದ್ಯಂತ ತುರ್ತುಪರಿಸ್ಥಿತಿಯನ್ನು ಘೋಷಿಸಿದ ಸಂದರ್ಭ. ಇಂದಿರಾರವರ ವಿರೋಧಿಗಳ ದೊಡ್ಡಪಟ್ಟಿಯಲ್ಲಿ ಹಲವು ಸಂಘಸಂಸ್ಥೆಗಳೂ ಇದ್ದವು. ಅವುಗಳಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹೆಸರು ಪ್ರಮುಖವಾಗಿ ಇದ್ದಿರಲೇಬೇಕು.

ಆಗ ಹುಬ್ಬಳ್ಳಿಯಲ್ಲಿ ಸಂಘದ ಚಟುವಟಿಕೆಗಳನ್ನು ನೋಡಿಕೊಳ್ಳುತ್ತಿದ್ದವರಲ್ಲಿ ನಗರ ಪ್ರಚಾರಕರಾಗಿದ್ದ ಶ್ರೀ ಮಂಗೇಶ್ ಭೇಂಡೆ, ಕಾರ್ಯಾಲಯ ಪ್ರಮುಖರಾಗಿದ್ದ ಶ್ರೀ ಬದರೀನಾಥ್, ಸರ್ವಶ್ರೀ ಕಾಶೀನಾಥ ಮಿಸ್ಕಿನ್, ಪ್ರಕಾಶ್ ನಾಯಕ್, ಪ್ರಮೋದ್ ಮುತಾಲಿಕ್, ರಮೇಶ್ ದಿವಟೆ ಮೊದಲಾದವರು ಮುಖ್ಯರು. ಹುಬ್ಬಳ್ಳಿಯ ಐ.ಟಿ.ಐ. ಕಾಲೇಜಿಗೆ ಇನ್‌ಸ್ಟ್ರಕ್ಟರ್ ಆಗಿ ಬಂದಿದ್ದ ಶ್ರೀ ನರಹರಿ ಫಡಕೆ ಸೇರಿದಂತೆ ಎಲ್ಲ ಹಿರಿಯರೂ ಶಾಖೆಯ ಸದಸ್ಯರಿಗೆ ಸೂಕ್ತ ಮಾರ್ಗದರ್ಶನ ನೀಡತೊಡಗಿದರು

ಸಂಘದ ಕಾರ್ಯಚಟುವಟಿಕೆಗಳನ್ನು ಸರ್ಕಾರ ನಿಷೇಧಿಸಿತ್ತು. ಸಂಘದ ಎಲ್ಲ ಕಾರ್ಯಾಲಯಗಳನ್ನು ಮುಚ್ಚಿ ಬೀಗಮುದ್ರೆ ಹಾಕುವಂತೆ ಪೋಲೀಸರಿಗೆ ಆದೇಶ ನೀಡಲಾಗಿತ್ತು. ಸರ್ಕಾರದವರು ಕೈಹಾಕುವ ಮೊದಲು ಕಾರ್ಯಾಲಯದೊಳಗಿರುವ ಸಂಘದ ಸಾಮಗ್ರಿಗಳನ್ನೆಲ್ಲ ಹೇಗಾದರೂ ಹೊರತೆಗೆಯಬೇಕಾಗಿತ್ತು. ಹೇಗೂ ರಾತ್ರಿಯ ವೇಳೆ ಸಂಘದ ಕಾರ್ಯಾಲಯಕ್ಕೆ ಪೋಲೀಸ್ ಪಹರೆ ಇರುತ್ತಿರಲಿಲ್ಲ. ಹಿಂಬಾಗಿಲಿನಿಂದ ಕಾರ್ಯಾಲಯದೊಳಗೆ ನುಗ್ಗಿ ಅಲ್ಲಿದ್ದ ಎಲ್ಲ ವಸ್ತುಗಳನ್ನೂ ತೆಗೆದು ಸುರಕ್ಷಿತ ಸ್ಥಳಕ್ಕೆ ತಲುಪಿಸುವ ಹೊಣೆಯನ್ನು ಅನಂತಕುಮಾರ ಮತ್ತು ಅವನ ಗೆಳೆಯರ ಗುಂಪಿಗೆ ವಹಿಸಲಾಯಿತು. ನರಹರಿ ಫಡಕೆಯವರ ಅಕ್ಕನ ಮಗ ಅಚ್ಯುತ ಲಿಮಯೆ, ವಿಷ್ಣುಕಾಂತ ಚಟಪಲ್ಲಿ, ವಾದೀಂದ್ರಾಚಾರ್, ರಮೇಶ ದಿವಟೆ ಮತ್ತು ಅನಂತಕುಮಾರ-ಇವರೆಲ್ಲ ಈ ಜವಾಬ್ದಾರಿ ಹೊತ್ತ ಹುಡುಗರು. ಪೋಲೀಸರಿಗೆ ಗೊತ್ತಾಗದಂತೆ ಹಿಂಬಾಗಿಲಿನಿಂದ ಕಾರ್ಯಾಲಯಕ್ಕೆ ನುಗ್ಗಿ ಅಲ್ಲಿದ್ದ ಎಲ್ಲ ವಸ್ತುಗಳನ್ನೂ ಸುರಕ್ಷಿತವಾಗಿ ಹೊರಕ್ಕೆ ಸಾಗಿಸಿಬಿಟ್ಟರು. ಹೋರಾಟದ ದಿಕ್ಕಿನಲ್ಲಿ ತಮ್ಮ ಮೊದಲ ಹೆಜ್ಜೆ ಯಶಸ್ವಿಯಾದುದು ಈ ಹುಡುಗರಿಗೆ ಹೊಸ ಹುರುಪನ್ನು ತಂದಿತು. ಆ ವೇಳೆಗೆ ಕಾಲೇಜುಗಳೇನೋ ಪ್ರಾರಂಭವಾಗಿದ್ದವು. ಪ್ರತಿದಿನ ಹುಡುಗರೆಲ್ಲ ಮನೆಯಿಂದ ನಿಗದಿತ ಸಮಯಕ್ಕೆ ಹೊರಡುವರು. ಆದರೆ ಕಾಲೇಜಿಗೆ ಹೋಗುವವರಲ್ಲ. ಇನ್ನೇನಿದ್ದರೂ ಭೂಗತ ಚಳುವಳಿ. ಸರ್ಕಾರದ, ಮುಖ್ಯವಾಗಿ ಪೋಲೀಸರ ಕಣ್ಣುತಪ್ಪಿಸಿ ಸಂಘದ ಹಿರಿಯರು ಕೊಡುವ ಸೂಚನೆಗಳನ್ನು ಪಾಲಿಸುವುದು. 1975ರ ವೇಳೆಗೆ ವಾಮನಾಚಾರ್ಯ ಆಯೀ ಅವರ ವೈದ್ಯಕೀಯ ಶಿಕ್ಷಣ ಮುಗಿದಿತ್ತು. ಅವರಿಗೆ ಮುಂಬಯಿಯಲ್ಲಿ ಮೆಡಿಕಲ್ ಆಫೀಸರ್ ಹುದ್ದೆಯ ನೇಮಕಾತಿಯೂ ಆಗಿತ್ತು. ಪ್ರಸ್ತುತ ಸನ್ನಿವೇಶದಲ್ಲಿ ತಾವು ಬಂಧನಕ್ಕೀಡಾಗಿ ಸೆರೆಮನೆಗೆ ಹೋಗುವುದಕ್ಕಿಂತ ಭೂಗತ ಹೋರಾಟದಲ್ಲಿ ತೊಡಗಿಕೊಳ್ಳುವುದೇ ಸೂಕ್ತವೆಂದು ಅವರು ತೀರ್ಮಾನಿಸಿದ್ದರು. ಹೀಗಾಗಿ ಹುಬ್ಬಳ್ಳಿಯ ಭಾಗದಲ್ಲಿ ಭೂಗತ ಚಳುವಳಿಯ ನಿರ್ವಹಣೆಯನ್ನು ವಾಮನಾಚಾರ್ಯರು ವಹಿಸಿಕೊಂಡರು.



ಡಾ. ವಾಮನಾಚಾರ್ಯ

ಅನಂತಕುಮಾರನ ಮನೆಯಿದ್ದುದು ಎಂ.ಟಿ. ಎಸ್. ಕಾಲೊನಿ, ವಿಷ್ಣುಕಾಂತನ ಮನೆ ಸ್ಟೇಶನ್ ರೋಡಿನಲ್ಲಿ. ಇವರಿಬ್ಬರ ಮನೆಯ ನಡುವಣ ಭಾಗದ ದೇಶಪಾಂಡೆ ನಗರದಲ್ಲಿ ವಾಮನಾಚಾರ್ಯರ ಮನೆಯಿದ್ದುದು. ಭೂಗತ ಹೋರಾಟಕ್ಕೆ ಹೇಳಿಮಾಡಿಸಿದಂಥ ಮನೆ; ಮನೆಯೇ ಭೂಗತ ಎಂದರೂ ಸರಿಯೇ. ಮನೆಯೊಳಗೆ ಹೋದರೂ ಅವರೆಲ್ಲಿದ್ದಾರೆ, ಎತ್ತ ಹೋಗಬೇಕೆಂದು ತಿಳಿಯಲಾರದು. ಅಂಥ ಒಂದು ಸೆಲ್ಲರ್ ಕೊಠಡಿಯಲ್ಲಿ ಅವರಿರುತ್ತಿದ್ದರು.

ಅಂದಿನ ದಿನಗಳಲ್ಲಿ ಕೆ.ಎಂ.ಸಿ. ವೈದ್ಯಕೀಯ ಕಾಲೇಜು, ಸಂಘ ಮತ್ತು ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಿಗೆ ಹೆಸರುವಾಸಿಯಾಗಿತ್ತು. ಕರ್ನಾಟಕದಲ್ಲಿ ಸಂಘದ ಮೊದಲ ಸಂಘಚಾಲಕರಾಗಿದ್ದ ಅಪ್ಪಾಸಾಹೇಬ ಜಿಗಜಿನ್ನಿಯವರ ಮಗ ಮಾಧವ ಜಿಗಜಿನ್ನಿ, ಡಾ. ವಾಮನಾಚಾರ್ಯ, ಡಾ. ಪಾಂಡುರಂಗಿ, ವಿನೋದ್ ದೇಶಪಾಂಡೆ ಮೊದಲಾದವರು ಈ ಸಂಸ್ಥೆಯಿಂದ ಬಂದವರು. ಅವರಲ್ಲಿ ಈಗಲೂ ಸಕ್ರಿಯವಾಗಿರುವವರು ವಾಮನಾಚಾರ್ಯರೇ. ಅನಂತಕುಮಾರ್ ಮತ್ತವನ ಗೆಳೆಯರಿಗೆ ಎಮರ್ಜೆನ್ಸಿ ಕಾಲದ ಭೂಗತ ಹೋರಾಟದಲ್ಲಿ ಸಂಪರ್ಕಕ್ಕೆ ಬಂದವರೆಲ್ಲ ಸಂಘದ ಹಿರಿಯರು ಮತ್ತು ಕಾರ್ಯಕರ್ತರೇ. ಆಗ ಈ ಹುಡುಗರಿನ್ನೂ ವಿದ್ಯಾರ್ಥಿ ಪರಿಷತ್ತಿನ ಸಂಪರ್ಕಕ್ಕೆ ಬಂದಿರಲಿಲ್ಲ. ಅಂದಮೇಲೆ, ಇವರ ಭೂಗತ ಹೋರಾಟವು ಸಂಘದ ಚಟುವಟಿಕೆಗಳ ಭಾಗವೇ ಆಗಿತ್ತು.

ಈ ಭೂಗತ ಹೋರಾಟದಲ್ಲಿ ಅನೇಕ ವಿದ್ಯಾರ್ಥಿಗಳೂ ಯುವಕರೂ ಸಂಘದ ಸ್ವಯಂಸೇವಕರೂ ನೂರಾರು ಸಂಖ್ಯೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಹೀಗೆ ಭಾಗವಹಿಸಿದವರಲ್ಲಿ ಶ್ರೀ ಬಾಬು ಕೃಷ್ಣಮೂರ್ತಿಯವರೂ ಇದ್ದರು. ಶ್ರೀಕಾಂತ ದೇಸಾಯಿ, ಹನುಮಂತ ಇನಾಂದಾರ್, ಆನಂದ ಜೋಶಿ, ಜಿ.ಎಂ. ಇನಾಂದಾರ್, ಡಾ. ವೇದವ್ಯಾಸಾಚಾರ್, ಕಂಬಾಳಿಮಠ್ ಮೊದಲಾದವರೂ ಈ ಉತ್ಸಾಹಿ ಗುಂಪಿನಲ್ಲಿ ಸೇರಿದ್ದರು. ವಾಮನಾಚಾರ್ಯರ ಭೂಗತ ಕೊಠಡಿಯೇ ಅಂದಿನ ಭೂಗತ ಹೋರಾಟಕ್ಕೆ ಕೇಂದ್ರಸ್ಥಾನವಾಗಿತ್ತು. ಉಳಿದವರಿಗೆ ಗೊತ್ತಾಗದ ರೀತಿಯಲ್ಲಿ ಹುಡುಗರು ಯಾವ ಬಗೆಯ ಕೆಲಸಗಳನ್ನು ನಿರ್ವಹಿಸಬಹುದೋ ಅವೆಲ್ಲವನ್ನೂ ಈ ಗೆಳೆಯರು ಮಾಡುತ್ತಿದ್ದರು. ಸಂಜೆ ಕಾಲೇಜು ಮುಗಿಯುವ ಸಮಯ ನೋಡಿಕೊಂಡು ತಪ್ಪದೆ ತಮ್ಮ ಮನೆ ಸೇರಿಕೊಳ್ಳುತ್ತಿದ್ದರು.

ಸಂಘವು ನಿಷೇಧಿಸಲ್ಪಟ್ಟಿದ್ದರಿಂದ ಕಾರ್ಯಾಲಯದಲ್ಲಿ ಯಾವುದೇ ಚಟುವಟಿಕೆಯನ್ನೂ ನಡೆಸುವ ಹಾಗಿರಲಿಲ್ಲ. ಹಾಗಾಗಿ ವಾಮನಾಚಾರ್ಯರ ಮನೆಯ ತಳಮಹಡಿಯೇ ಎಲ್ಲ ಚಟುವಟಿಕೆಗಳ ಕೇಂದ್ರವಾಗಿತ್ತು. ಇಡೀ ಮನೆಯೇ ರಸ್ತೆಗಿಂತ ಕೆಳಮಟ್ಟದಲ್ಲಿತ್ತು. ಈ ಮನೆಯ ತಳಮಹಡಿಯಲ್ಲಿ ರಮೇಶ ಹೆಗಡೆ ಎಂಬುವವರು ವಾಸವಾಗಿದ್ದರು. ಕರಪತ್ರಗಳನ್ನು ಮುದ್ರಿಸುವ ಸೈಕ್ಲೋಸ್ಟೈಲ್ ಯಂತ್ರ ಮತ್ತು ಅನೇಕ ಪ್ರಚಾರ ಸಾಮಗ್ರಿಗಳು ಅಲ್ಲಿದ್ದವು. ಜಿಲ್ಲಾ ಪ್ರಚಾರಕರಾಗಿದ್ದ ಬದರೀನಾಥ್ ಇನ್ನಿಬ್ಬರು ಪ್ರಚಾರಕರೊಡನೆ ಅಲ್ಲಿಯೇ ವಾಸವಾಗಿದ್ದರು. ಬದರೀನಾಥರೇ ಊಟದ ವ್ಯವಸ್ಥೆ ಮಾಡುತ್ತಿದ್ದರು. ಕಾರವಾರದ ಪ್ರಕಾಶ್ ನಾಯಕ್ ಅಲ್ಲಿಯೇ ತಂಗಿದ್ದರು. ಹೊ.ವೆ. ಶೇಷಾದ್ರಿಯವರೂ ಒಮ್ಮೆ ಅಲ್ಲಿಗೆ ಭೇಟಿ ನೀಡಿದ್ದರು. ಆ ಮನೆಗೆ ಅನಂತಕುಮಾರ್ ಆಗಾಗ ಬರುತ್ತಿದ್ದರು.

ಗುಂಪಿನಲ್ಲಿದ್ದ ಹುಡುಗರ ಮನೆಯವರಿಗೆ ಇವರ ಚಟುವಟಿಕೆಗಳು ಗೊತ್ತಾಗುವ ಸಂಭವವೇ ಇರಲಿಲ್ಲ. ಅನಂತಕುಮಾರನ ಮನೆಯವರಿಗೆ ಸೂಚನೆ ಸಿಕ್ಕಿದ್ದರೂ ಸಿಕ್ಕಿರಬಹುದು. ಕೆಲವರ ತಾಯ್ತಂದೆಯರಿಗಂತೂ ತಮ್ಮ ಮಗ ಜೈಲಿಗೆ ಹೋಗಿದ್ದಾನೆ ಎಂಬ ಸುದ್ದಿ ಬಂದಾಗಲೇ ಅವನ ಸಾಹಸ ತಿಳಿಯುವಂತಾಗಿದ್ದು. ಅಚ್ಯುತ ಲಿಮಯೆಯ ತಂದೆತಾಯಿಯವರು ಮಗನ ಈ ಮಾದರಿಯ ಚಟುವಟಿಕೆಗಳನ್ನು ಬೆಂಬಲಿಸುತ್ತಿರಲಿಲ್ಲ. ಆದರೆ, ಅಚ್ಯುತನ ಅಜ್ಜ ಸ್ವಾತಂತ್ರ್ಯ ಹೋರಾಟಗಾರರಾಗಿದ್ದವರು. ಅಚ್ಯುತ ಮತ್ತವನ ಗೆಳೆಯರನ್ನು ಯಾವಾಗಲೂ ಹುರಿದುಂಬಿಸುತ್ತಿದ್ದ ಆ ವೃದ್ಧರು, ಬೈಠಕ್ ಯಾವಾಗ ಮಾಡುತ್ತೀರಿ, ಯಾವ ಕೆಲಸ ಮಾಡುತ್ತೀರಿ ಇತ್ಯಾದಿ ವಿಚಾರಿಸಿಕೊಳ್ಳುತ್ತಿದ್ದರು. ಅವರ ಬೆಂಬಲವಂತೂ ಸದಾ ಸಿದ್ಧವಾಗಿರುತ್ತಿತ್ತು. ಈಗಿನ್ನೂ ಪ್ರೌಢಶಾಲೆ ದಾಟಿ ಬಂದ ಬಾಲಕರಿಗೆ ಅಷ್ಟು ಚಿಕ್ಕ ವಯಸ್ಸಿನಲ್ಲಿ ಭೂಗತ ಚಳುವಳಿಯ ಹೋರಾಟದ ಸಾಹಸ, ರೋಮಾಂಚನ, ಕ್ರಿಯಾತ್ಮಕ ಚಟುವಟಿಕೆಗಳು ಲಭ್ಯವಾದುದೇ ಒಂದು ಅಪೂರ್ವ ಅವಕಾಶ. ಅನಂತಕುಮಾರನೂ ಅವನ ಗೆಳೆಯರೂ ಮುಂದಿನ ಆರೇಳು ತಿಂಗಳ ಅವಧಿಯಲ್ಲಿ ಈ ಹೋರಾಟದಲ್ಲಿ ಪಾಲ್ಗೊಂಡ ಪರಿ ಅವರ ಪಾಲಿಗಂತೂ ಅವಿಸ್ಮರಣೀಯ. ◆

# ಸೌಜನ್ಯಪೂರ್ಣ ರಾಜಕಾರಣ

ಪುಟ 1 ರಿಂದ ಆಗ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರು ದೆಹಲಿಗೆ ತೆರಳಿ ಅನಂತಕುಮಾರ್ ಅವರ ಮನೆಗೇ ಬಂದು ತಮ್ಮ ವಯಸ್ಸಿನ ಹಿರಿತನ ಮತ್ತು ಅಧಿಕೃತ ಶಿಷ್ಟಾಚಾರವನ್ನು ಬದಿಗಿಟ್ಟು ಹೂಗುಚ್ಛವನ್ನಿತ್ತು ರಾಜ್ಯದ ಪರವಾಗಿ ಕೃತಜ್ಞತೆ ಸಲ್ಲಿಸಿದ್ದರು. ಇಂತಹುದೇ ಮತ್ತೊಂದು ಸನ್ನಿವೇಶ ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವ ಪ್ರಸ್ತಾವನೆಯ ಸಂದರ್ಭದಲ್ಲೂ ಒದಗಿತ್ತು. ಕರ್ನಾಟಕದ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಮುಖ್ಯಮಂತ್ರಿ ಕೃಷ್ಣ ಮತ್ತು ನೀರಾವರಿ ಮಂತ್ರಿ ಹೆಚ್.ಕೆ. ಪಾಟೀಲರು ದೆಹಲಿಗೆ ತೆರಳಿ ಮೊದಲು ಭೇಟಿ ಮಾಡಿದ್ದು ಅನಂತಕುಮಾರ್ ಅವರನ್ನೇ. ಅನಂತಕುಮಾರ್ ಇಬ್ಬರನ್ನೂ ಪ್ರಧಾನಿ ವಾಜಪೇಯಿ ಅವರ ಬಳಿ ಕರೆದುಕೊಂಡು ಹೋಗಿ ವಸ್ತುಸ್ಥಿತಿಯನ್ನು ವಿವರಿಸಿ ಈ ಯೋಜನೆಯಿಂದ ಕೃಷಿಕರಿಗೆ ಆಗುವ ಅನುಕೂಲವನ್ನು ಪ್ರಧಾನಿಯವರಿಗೆ ಮನವರಿಕೆ ಮಾಡಿಕೊಟ್ಟು ಅವರ ಒಪ್ಪಿಗೆಯನ್ನು ಪಡೆದರು. ಭಾರತ ಸರಕಾರದ ಸಾಲಿಸಿಟರ್ ಜನರಲ್ ಆಗಿದ್ದ ಹರೀಶ್ ಸಾಳ್ವೆ ಅವರನ್ನು ತಮ್ಮ ಮನೆಗೇ ಕರೆಸಿಕೊಂಡು ಈ ವಿಷಯದಲ್ಲಿ ಕೇಂದ್ರದ ಆಕ್ಷೇಪಣೆ ಇಲ್ಲವೆಂದು ಸುಪ್ರೀಂ ಕೋರ್ಟ್‌ಗೆ ತಿಳಿಸುವಂತೆ ಕೋರಿ ಚಾಣಾಕ್ಷತೆಯಿಂದ ಸಮಸ್ಯೆಯನ್ನು ಪರಿಹರಿಸಿದರು. ಅನಂತಕುಮಾರ್ ಅವರು ನಿಧನರಾದಾಗ ಎಸ್.ಎಂ ಕೃಷ್ಣ ಅವರು ತಮ್ಮ ಅಂತಿಮ ನಮನ ಸಲ್ಲಿಸುತ್ತ, "ರಾಜ್ಯದ ಯಾವುದೇ ಜ್ವಲಂತ ಸಮಸ್ಯೆಗಳು ಬಂದಾಗ ದೆಹಲಿ ಮಟ್ಟದಲ್ಲಿ ಸಹಕಾರ ನೀಡುತ್ತಿದ್ದವರು ಅನಂತಕುಮಾರ್. ಅವರು ತಮ್ಮ ಹೃದಯ ವೈಶಾಲ್ಯದಿಂದ ಅಪಾರ ಜನಮನ್ನಣೆ ಗಳಿಸಿದ್ದರು" ಎಂದು ನುಡಿದಿದ್ದರು. ಬೆಂಗಳೂರು ನಗರವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಾಗಲು ಶ್ರಮಿಸಿದ್ದ ಎಸ್. ಎಂ. ಕೃಷ್ಣ ಅವರ ನಿಧನಕ್ಕೆ ಸಂತಾಪ ಸೂಚಿಸುತ್ತಾ, ಅದಮ್ಯ ಚೇತನದ ಅಧ್ಯಕ್ಷರಾದ




ತೇಜಸ್ವಿನಿ ಅನಂತಕುಮಾರ್ ಅವರು "ಸ್ನೇಹಜೀವಿ, ಹಿರಿಯ ರಾಜಕಾರಣಿಯನ್ನು ರಾಜ್ಯ ಕಳೆದುಕೊಂಡಿದೆ. ಅವರ ಅಗಲಿಕೆಯಿಂದ ರಾಜ್ಯಕ್ಕೆ ಬಹಳ ನಷ್ಟವಾಗಿದೆ. ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅದಮ್ಯ ಚೇತನದ ಅಡುಗೆಮನೆ ನಿರ್ಮಾಣಕ್ಕೆ ಜಾಗ ಮಂಜೂರು ಮಾಡಿದ್ದರು. ಅನಂತಕುಮಾರರು ಕೇಂದ್ರ ಸಚಿವರಾಗಿದ್ದಾಗ ಎಸ್.ಎಂ. ಕೃಷ್ಣ ಮುಖ್ಯಮಂತ್ರಿ ಆಗಿದ್ದರು. ಇಬ್ಬರೂ ಸೇರಿ ಬೆಂಗಳೂರಿಗೆ ಮಹತ್ವದ ಕೊಡುಗೆ ನೀಡಿದ್ದಾರೆ" ಎಂದು ನುಡಿದಿದ್ದಾರೆ. **-ಜಿ. ಪಿ. ನಾಗರಾಜನ್**

# ಗ್ರಾಮವಾಸಿಗಳ ಆರೋಗ್ಯ ತುರ್ತುಸೇವೆಗೆ..

ಪುಟ 1 ರಿಂದ ಇತ್ತೀಚೆಗೆ ತಾಯಿಯ ಎದೆಯ ಹಾಲಿನಲ್ಲಿಯೂ ಮೈಕ್ರೋಪ್ಲಾಸ್ಟಿಕ್ ಕುರುಹುಗಳು ಪತ್ತೆಯಾಗಿವೆ. ಮೈಕ್ರೋಪ್ಲಾಸ್ಟಿಕ್‌ಗಳು ಒಡ್ಡುತ್ತಿರುವ ಸಮಸ್ಯೆಗಳ ಬಗ್ಗೆ ನಾವು ಎಚ್ಚರಿಕೆ ವಹಿಸಬೇಕು. ಪ್ಲಾಸ್ಟಿಕ್, ಬಳಕೆ ಕಡಿಮೆ ಮಾಡುವುದರೊಂದಿಗೆ, ಪರಿಸರವನ್ನು ಸಂರಕ್ಷಿಸಬೇಕು. ಪ್ರತಿಯೊಂದು ಅಡುಗೆಮನೆಯೂ ಪಾಕಶಾಲೆಯೊಂದಿಗೆ ಪಾಠಶಾಲೆಯೂ ಆಗಬೇಕು. ಇಲ್ಲಿ ಉತ್ಪತ್ತಿಯಾಗುವ ಕಸದ ಪ್ರಮಾಣ ಕಡಿಮೆಯಾಗಬೇಕು. ಇದರ ಮೂಲಕ ಪರಿಸರ ಸಂರಕ್ಷಣೆಯಾಗಿ ಸುಸ್ಥಿರ ಜೀವನಪದ್ಧತಿಗಳನ್ನು ಅನುಸರಿಲು ಸಾಧ್ಯವಾಗುತ್ತದೆ" ಎಂದೂ ಅವರು ಹೇಳಿದರು.

ಈ ಸಂದರ್ಭದಲ್ಲಿ ಶ್ರೀ ಕೃಷ್ಣ ಆಸ್ಪತ್ರೆಯ ಆಡಳಿತ ನಿರ್ದೇಶಕ ಡಾ. ಮುರಳಿ ಇರ್ವತ್ರಾಯ, ವೈದ್ಯಕೀಯ ನಿರ್ದೇಶಕಿ ಡಾ.ವಂದನಾ ಎಂ. ಇರ್ವತ್ರಾಯ, ವಿಧಾನ ಪರಿಷತ್ ಸದಸ್ಯ ಶ್ರೀ ಕಿಶೋರ್‌ಕುಮಾರ್ ಬೊಟ್ಯಾಡಿ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ. ಹರೀಶ್ ಕುಮಾರ್ ಮಂಗಳೂರಿನ ಕೆಎಂಸಿ ಆಸ್ಪತ್ರೆಯ ಪ್ರಾದೇಶಿಕ ಮುಖ್ಯ ನಿರ್ವಾಹಕ ಅಧಿಕಾರಿ ಸಗೀರ್ ಸಿದ್ಧಿಕಿ, ಎಮರ್ಜೆನ್ಸಿಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಜೀಧು ರಾಧಾಕೃಷ್ಣನ್, ಧರ್ಮಸ್ಥಳ ವಿಮೆ ವಿಭಾಗದ ಪ್ರಾದೇಶಿಕ ನಿರ್ದೇಶಕ ವಸಂತ ಸಾಲ್ಯಾನ್, ಧರ್ಮಸ್ಥಳ ದೇವಾಲಯದ ಮಣೆಗಾರ ವಸಂತ ಮಂಜಿತ್ತಾಯ, ಚಾರ್ಮಾಡಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಶ್ರೀಮತಿ ಶಾರದ ಮೊದಲಾದ ಗಣ್ಯರು ಉಪಸ್ಥಿತರಿದ್ದು ಶುಭಕೋರಿದರು.

# ಅನಂತಪಥ - ಅನಿಸಿಕೆ



ಪತ್ರಿಕೆಯೊಂದನ್ನು ನಿರಂತರವಾಗಿ ಹೊರತರುವುದು ದೊಡ್ಡ ಸವಾಲು. ಸಂಚಿಕೆಗಳನ್ನು ಪ್ರಕಟಿಸುವುದಷ್ಟೇ ಅಲ್ಲ, ಪ್ರಕಟವಾದ ಸಂಚಿಕೆಗಳ ಹೂರಣ ಓದುಗರಿಗೆ ಆಸಕ್ತಿಕರವಾಗಿರುವಂತೆ ನೋಡಿಕೊಳ್ಳುವುದೂ ಸವಾಲೇ. ಸಂಸ್ಥೆಯೊಂದರ ವಾರ್ತಾಪತ್ರವನ್ನು ಹೊರತರುವಾಗ ಈ ಸವಾಲು ಇನ್ನಷ್ಟು ಕ್ಲಿಷ್ಟವಾಗಿಬಿಡುತ್ತದೆ. ಸಂಸ್ಥೆಯ ಉದ್ದೇಶ ಹಾಗೂ ಕಾರ್ಯಕ್ರಮಗಳ ಬಗ್ಗೆ ಹೇಳುತ್ತಲೇ ಓದುಗರ ಆಸಕ್ತಿಯನ್ನೂ ಕಾಯ್ದುಕೊಳ್ಳಬೇಕಾದ ಜವಾಬ್ದಾರಿ ಪ್ರಕಾಶಕರ - ಸಂಪಾದಕರ ಹೆಗಲೇರುತ್ತದೆ. ಅನಂತಕುಮಾರ್ ಪ್ರತಿಷ್ಠಾನದ 'ಅನಂತಪಥ' ಈ ಸವಾಲುಗಳನ್ನೆಲ್ಲ ಸಮರ್ಥವಾಗಿ ಎದುರಿಸಿ ಐವತ್ತು ಸಂಚಿಕೆಗಳನ್ನು ಹೊರತಂದಿದೆ. ಪ್ರತಿಷ್ಠಾನದ ಕಾರ್ಯಕ್ರಮಗಳ ಬಗ್ಗೆ, ಅನಂತಕುಮಾರರ ಜೀವನ-ಸಾಧನೆಗಳ ಬಗ್ಗೆ ಈ ಐವತ್ತು ಸಂಚಿಕೆಗಳಲ್ಲಿ ಓದುಗರು ಸಾಕಷ್ಟು ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಆದರೆ ಅನಂತಪಥ ಅಷ್ಟಕ್ಕೇ ಸೀಮಿತವಾಗಿಲ್ಲ. ಪ್ರತಿಷ್ಠಾನದ ಕಾರ್ಯಕ್ರಮಗಳಲ್ಲಿ ಪರಿಣತರು ಮಂಡಿಸಿದ ವಿಚಾರಗಳ ಸಂಗ್ರಹ, ವಿವಿಧ ಸಾಧಕರ ಪರಿಚಯ ಹಾಗೂ ಸಂದರ್ಶನ, ಪುಸ್ತಕ ಪರಿಚಯ, ಪರಿಸರ, ವಿಜ್ಞಾನ, ಆರೋಗ್ಯ, ಕಲೆ-ಸಂಸ್ಕೃತಿ ಮುಂತಾದ ವಿಷಯಗಳನ್ನು ಕುರಿತ ಲೇಖನಗಳೂ ಇಲ್ಲಿ ಪ್ರಕಟವಾಗಿವೆ. ವಾರ್ತಾಪತ್ರವೊಂದು ಸಂಕ್ಷಿಪ್ತವಾಗಿದ್ದರೂ ಹೇಗೆ ಸಮಗ್ರವಾಗಿ, ಆಕರ್ಷಕವಾಗಿ ಮೂಡಿಬರಬಹುದು ಎನ್ನುವುದಕ್ಕೆ ಉದಾಹರಣೆಯಂತಿರುವ 'ಅನಂತಪಥ' ತಂಡದ ಎಲ್ಲರಿಗೂ ಈ ವಿಶೇಷ ಸಂದರ್ಭದಲ್ಲಿ ನನ್ನ ಅಭಿನಂದನೆಗಳು. ಮುಂದಿನ ದಿನಗಳಲ್ಲಿ ನಿಮ್ಮ ಪತ್ರಿಕೆ ಇನ್ನಷ್ಟು ಹೊಸ ಪ್ರಯೋಗಗಳನ್ನು ಮಾಡಲೆಂದು ಹಾರೈಸುತ್ತೇನೆ.

**-ಟಿ. ಜಿ. ಶ್ರೀನಿಧಿ, ಮಾಹಿತಿ ತಂತ್ರಜ್ಞಾನ ಲೇಖಕರು**



# ಶ್ರದ್ಧಾಂಜಲಿ

ಹಿರಿಯ ಸಾಹಿತಿ ಶ್ರೀ ಮಹಾಬಲ ಕೊಡ್ಲೆಕೆರೆ ಅವರ ಧರ್ಮಪತ್ನಿ ಶ್ರೀಮತಿ ಮೀನಾ ಕೊಡ್ಲೆಕೆರೆ ಅವರು ಇತ್ತೀಚಿಗೆ ಸ್ವರ್ಗಸ್ಥರಾದರು. ಶ್ರೀಮತಿ ಮೀನಾ ಅವರು ಅದಮ್ಯ ಚೇತನದ ಉತ್ಸಾಹಿ ಕಾರ್ಯಕರ್ತೆಯರಲ್ಲಿ ಒಬ್ಬರಾಗಿದ್ದರು. ಅವರ ಅಗಲಿಕೆಗೆ ಸಂತಾಪ ಸೂಚಿಸುತ್ತಾ ಅದಮ್ಯ ಚೇತನದ ಪರವಾಗಿ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇವೆ.

# ದತ್ತಾಂಶ ಗೋಪ್ಯತೆ ಮತ್ತು ದತ್ತಾಂಶ ಸಂರಕ್ಷಣೆ ಕಾಯಿದೆಯ (DPDP Act) ಜಾರಿ

13th Nation First Dialogue

[ಅನಂತಕುಮಾರ್ ಪ್ರತಿಷ್ಠಾನ ನಡೆಸಿಕೊಡುತ್ತಿರುವ "ದೇಶ ಮೊದಲು ಸಂವಾದ" ಕಾರ್ಯಕ್ರಮದಲ್ಲಿ ಶ್ರೀ ಸುಪ್ರತಿಮ್ ಚಕ್ರವರ್ತಿ ನೀಡಿದ ಉಪನ್ಯಾಸದ ಸಾರಾಂಶ]



**ಸುಪ್ರತಿಮ್ ಚಕ್ರವರ್ತಿ**
**ಖೇತಾನ್ & ಕೋ ಕಂಪೆನಿಯ**
**ದತ್ತಾಂಶ ರಕ್ಷಣಾ ತಂಡದ ಮುಖ್ಯಸ್ಥ**

ಜಸ್ಟಿಸ್ ಶ್ರೀಕೃಷ್ಣರವರು ಕಾನೂನಿನ ನೆಲೆಯಲ್ಲಿಯೂ ಭಾರತೀಯಕರಣವನ್ನು ಪ್ರತಿಪಾದಿಸಿ ಭಾರತಕ್ಕೇ ವಿಶಿಷ್ಟವಾದಂತೆ ಸಿದ್ಧಪಡಿಸಿದ DPDP ಕಾಯಿದೆಯಲ್ಲಿ ದತ್ತಾಂಶ ರಕ್ಷಣೆಗಾಗಿ ಒಬ್ಬ ನ್ಯಾಸಕರ್ತನ ಸಂಬಂಧವನ್ನು ಸ್ಥಾಪಿಸಲಾಗಿದೆ. ದತ್ತಾಂಶ ರಕ್ಷಣೆಯ ಜಾಗತಿಕ ಕಾನೂನುಗಳಂತೆ ದತ್ತಾಂಶ ನ್ಯಾಸಕರ್ತ ಮತ್ತು ದತ್ತಾಂಶ ಅಧಿಕಾರಿಗಳ ನಡುವೆ ಕೇವಲ ವ್ಯಾವಹಾರಿಕ ಸಂಬಂಧವನ್ನು ನಮ್ಮ ಉದ್ದೇಶಿತ ಕಾಯಿದೆಯಲ್ಲಿ ನೋಡಲಾರಿರಿ. ಇಲ್ಲಿ ದತ್ತಾಂಶವನ್ನು ನಿಯಂತ್ರಕರಿಗೆ ನೀಡುವಾಗ ನ್ಯಾಸಕರ್ತನ ಸಂಬಂಧವನ್ನು ಸ್ಥಾಪಿಸಲಾಗಿದೆ. ವ್ಯಕ್ತಿಗಳನ್ನು ದತ್ತಾಂಶ ಅಧಿಕಾರಿ ಎಂದು ಕರೆದಾಗ ವ್ಯಕ್ತಿಗೆ ಹೆಚ್ಚಿನ ಅಧಿಕಾರ ಪ್ರಾಪ್ತವಾಗುತ್ತದೆ. ಅವನು ದತ್ತಾಂಶಗಳನ್ನು ಇನ್ನೂ ಹೆಚ್ಚಿನ ಜವಾಬ್ದಾರಿಯಿಂದ ಕಾಪಾಡಬೇಕಾಗುತ್ತದೆ.

ದತ್ತಾಂಶ ರಕ್ಷಣಾ ಕಾಯಿದೆಯನ್ನು ಸಂಸ್ಥೆಗಳಲ್ಲಿ ಜಾರಿಗೊಳಿಸಲು ಇದರಲ್ಲಿರುವ ಕಾನೂನಿನ ಅಂಶಗಳು ಮತ್ತು ಪ್ರಕ್ರಿಯೆಗಳ ಬಗ್ಗೆ ಅರಿವು ಮೂಡಿಸಿಕೊಂಡು ಅದರಲ್ಲಿ ಸೂಚಿಸಿರುವ ಪರಿಕರಗಳನ್ನು ಬಳಸಿಕೊಂಡು ಹೆಜ್ಜೆಯಿಡಬೇಕಾಗುತ್ತದೆ. **ಕಾಯಿದೆಯ ಜಾರಿಯ ಮೊದಲ ಹಂತ:** ಸಂಸ್ಥೆಯ ಎಲ್ಲ ಉದ್ಯೋಗಿಗಳಿಗೂ ಸೂಕ್ತ ತರಬೇತಿಯನ್ನು ನೀಡಿ ಅವರಲ್ಲಿ ಈ ಕುರಿತು ಸಂವೇದನಾಶೀಲತೆಯನ್ನು ಮೂಡಿಸುವುದು. ಪ್ರತಿಯೊಂದು ಸಂಸ್ಥೆಯ ಕೊಟ್ಟಕೊನೆಯ ವ್ಯಕ್ತಿಯೂ ದತ್ತಾಂಶ ಸಂರಕ್ಷಣೆಯ ಬಗ್ಗೆ ತಿಳಿದುಕೊಂಡಾಗ ಮಾತ್ರ ದೇಶದಲ್ಲಿ ದತ್ತಾಂಶ ಸಂರಕ್ಷಣೆಯ ವಾತಾವರಣ ನಿರ್ಮಾಣವಾಗಿದೆ ಎಂದು ಭಾವಿಸಬಹುದು. ಈ ಹಿನ್ನೆಲೆಯಲ್ಲಿ ನೀಡುವ ತರಬೇತಿಯನ್ನು ಉದ್ಯೋಗಿಗಳ ದರ್ಜೆಗನುಗುಣವಾಗಿ ಮೂರು ವಿಭಾಗಗಳನ್ನಾಗಿ ಮಾಡಬಹುದು. ಮೊದಲನೆಯದಾಗಿ, ಹಿರಿಯ ಅಧಿಕಾರಿಗಳಿಗೆ ನೀಡುವ ತರಬೇತಿ. ಇವರಿಗೆ ಹೆಚ್ಚಿನ ತರಬೇತಿ ಬೇಕಾಗುವುದಿಲ್ಲ. ತರಬೇತಿಯ ಅವಧಿ ಕೇವಲ ೪೫ ನಿಮಿಷಗಳಿಗೆ ಸೀಮಿತವಾಗಿರಬಹುದು. ಎರಡನೆಯದು, ಮಧ್ಯಮ ಮಟ್ಟದ ವ್ಯವಸ್ಥಾಪಕರಿಗೆ ನೀಡುವ ತರಬೇತಿ. ಇದು ಸುಮಾರು ಒಂದರಿಂದ ಎರಡು ಗಂಟೆಗಳ ಅವಧಿಯದ್ದಾಗಿರುತ್ತದೆ. ಕೊನೆಯದು, ಪ್ರಧಾನವಾದ ತರಬೇತಿ. ಇದನ್ನು ದತ್ತಾಂಶಗಳನ್ನು ಸ್ವೀಕರಿಸಿ ದಾಖಲಿಸುವ ವ್ಯಕ್ತಿಗಳಿಗೆ ನೀಡಲಾಗುತ್ತದೆ. ಈ ವ್ಯಕ್ತಿಗಳನ್ನು ಗೋಪ್ಯತಾ ಚಾಂಪಿಯನ್ಸ್ (Privacy Champions) ಎಂದು ಕರೆಯುತ್ತೇವೆ.

**ಎರಡನೆಯ ಹಂತ:** ನಮ್ಮ ಸಂಸ್ಥೆಯಲ್ಲಿ ದತ್ತಾಂಶ ರಕ್ಷಣೆಯ ಮಟ್ಟ ಈಗ ಹೇಗಿದೆ ಮತ್ತು ಕಾಯಿದೆಯಲ್ಲಿ ಸೂಚಿಸಿದ ಮಟ್ಟಕ್ಕೆ ಏರಲು ಇನ್ನೂ ಏನೇನು ಮಾಡಬೇಕಾಗಿದೆ ಎಂಬುದನ್ನು ವಿಶ್ಲೇಷಣೆ ಮಾಡಬೇಕು. ಇದನ್ನು ಅಂತರ ವಿಶ್ಲೇಷಣೆ (Gap Analysis) ಎನ್ನುತ್ತೇವೆ. ದತ್ತಾಂಶಗಳನ್ನು ಹೇಗೆ ಸ್ವೀಕರಿಸಲಾಗುತ್ತಿದೆ, ದಾಖಲಿಸಲಾಗುತ್ತಿದೆ ಮತ್ತು ಸಂಗ್ರಹಿಸಿಡಲಾಗುತ್ತಿದೆ ಎಂದು ತಿಳಿಯಲು ಎಲ್ಲ ಉದ್ಯೋಗಿಗಳಿಗೂ ಪ್ರಶ್ನಾವಳಿಯನ್ನು ನೀಡಿ ಮಾಹಿತಿ ಸಂಗ್ರಹಿಸಲಾಗುತ್ತದೆ.

**ಮೂರನೆಯ ಹಂತ:** ಅಂತರ ವಿಶ್ಲೇಷಣೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸುವುದು. ಇದಕ್ಕಾಗಿ ಸಂಬಂಧಿಸಿದ ಎಲ್ಲರೊಂದಿಗೆ ಚರ್ಚೆ ನಡೆಸಿ ಹಂತಹಂತವಾಗಿ ಜಾರಿಗೊಳಿಸಲು ಹೆಜ್ಜೆಗಳನ್ನು ಗುರುತಿಸಬೇಕು. ಅನೇಕ ವಿದೇಶೀ ಕಂಪೆನಿಗಳು ಮತ್ತು ಸಂಸ್ಥೆಗಳು ತಾವು ಈಗಾಗಲೇ ಸಾರ್ವತ್ರಿಕ ದತ್ತಾಂಶ ಸಂರಕ್ಷಣಾ ನಿಯಮ (General Data Protection Regulation, GDPR) ಗಳನ್ನು ಪಾಲಿಸುತ್ತಿರುವುದರಿಂದ ತಾವು ಈ ಬಗ್ಗೆ ಚಿಂತಿಸಬೇಕಾಗಿಲ್ಲ ಎಂದು ಭಾವಿಸುತ್ತಿವೆ. ಈ ಭಾವನೆ ಸರಿಯಲ್ಲ. ನಮ್ಮ ದೇಶದ ಉದ್ದೇಶಿತ ಕಾನೂನಿಗೂ GDPR ನಿಯಮಗಳಿಗೂ ಅನೇಕ ಅಂತರಗಳಿವೆ. ಅವುಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಅವುಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

೧. DPDP ಕಾಯಿದೆಯಲ್ಲಿ ವೈಯಕ್ತಿಕ ದತ್ತಾಂಶಗಳನ್ನು ವರ್ಗೀಕರಣ ಮಾಡಲಾಗಿಲ್ಲ. ಆದರೆ, GDPR ನಲ್ಲಿ ಸಾಮಾನ್ಯ ಮತ್ತು ಮಹತ್ವದ ದತ್ತಾಂಶಗಳು ಎಂಬ ವರ್ಗೀಕರಣವಿದೆ.

೨. GDPR ಜಾರಿಗೆ ಬಂದಾಗ ಅವುಗಳನ್ನು ಬಳಸಿಕೊಳ್ಳಲು ಅನುಮತಿಯನ್ನು ಕೋರಿ ಅಗಾಧಸಂಖ್ಯೆಯಲ್ಲಿ ಇಮೈಲ್‌ಗಳನ್ನು ಕಳಿಸಲಾಗಿತ್ತು. ಇದರಿಂದ ಸಂಸ್ಥೆಗಳ ವ್ಯವಹಾರದಲ್ಲಿ ಏರುಪೇರು ಉಂಟಾಗಿತ್ತು. ಈ ತೊಂದರೆಯನ್ನು ಅನುಲಕ್ಷಿಸಿ, DPDP ಕಾಯಿದೆಯಲ್ಲಿ ದತ್ತಾಂಶ ನ್ಯಾಸಕರ್ತನು ಈಗಾಗಲೇ ಸಂಗ್ರಹಿಸಿರುವ ಮಾಹಿತಿಗಳ ಬಗ್ಗೆ ಮತ್ತು ಅವುಗಳನ್ನು ಸಂಗ್ರಹಿಸಿರುವ ಉದ್ದೇಶದ ಬಗ್ಗೆ ದತ್ತಾಂಶ ಅಧಿಕಾರಿಗೆ ಒಂದು ನೋಟೀಸು ನೀಡುವುದರ ಜೊತೆಗೆ ಅವರ ವ್ಯಕ್ತಿಗತ ಹಕ್ಕುಗಳನ್ನು ತಿಳಿಯಪಡಿಸಿದರೆ ಸಾಕು. ಪ್ರತಿಯೊಬ್ಬ ದತ್ತಾಂಶ ಅಧಿಕಾರಿಯಿಂದ ಮರು-ಅನುಮತಿ ಪಡೆಯುವ ಅಗತ್ಯವಿಲ್ಲ.

೩. ಕಾನೂನುವ್ಯಾಪ್ತಿಯ ವಿಷಯದ ವಿಚಾರ ಬಂದಾಗ ನಮ್ಮ ಕಾಯಿದೆಯು ದತ್ತಾಂಶ ರಕ್ಷಣೆಗೆ ಮಹತ್ವನೀಡುವುದರ ಜೊತೆಜೊತೆಗೆ ಹೊಸಶೋಧಗಳು, ಉದ್ಯಮಶೀಲತೆ ಮತ್ತು ಸುಗಮ ವ್ಯವಹಾರಗಳನ್ನೂ ಲಕ್ಷ್ಯದಲ್ಲಿರಿಸಿಕೊಂಡು ರೂಪಿತವಾಗಿದೆ. ಈ ನಿಟ್ಟಿನಲ್ಲಿ ದತ್ತಾಂಶಗಳನ್ನು ಮುಕ್ತವಾಗಿ ವರ್ಗಾಯಿಸಬಹುದಾಗಿದೆ. ಆದರೆ ಸರಕಾರಕ್ಕೆ ಕೆಲವು ನಿಷೇಧಗಳನ್ನು ವಿಧಿಸುವ ಅಧಿಕಾರವಿದೆ. ಸರಕಾರವು ವಿಧಿಸಿದ ಕಾನೂನುವ್ಯಾಪ್ತಿಯಿಂದ ಹೊರಗೆ ದತ್ತಾಂಶವನ್ನು ಕಳಿಸುವಂತಿಲ್ಲ. ಜೊತೆಗೆ ಈಗಾಗಲೇ ಇರುವ ಕೆಲವು ನಿಯಮಗಳನ್ನು (ಉದಾಹರಣೆಗೆ ಪಾವತಿ ಪದ್ಧತಿಗಳ ಗೋಪ್ಯತೆಯ ಬಗ್ಗೆ ರಿಸರ್ವ್ ಬ್ಯಾಂಕ್ ನಿಯಮಗಳು) ಪಾಲಿಸಬೇಕು. ಆದರೆ GDPR ಪ್ರಕಾರ ನೀವು ಕಳಿಸುವ ದತ್ತಾಂಶಗಳು ಪರ್ಯಾಪ್ತವಾಗಿ ಗೋಪ್ಯವಾಗಿರುತ್ತವೆ ಎಂದು ನೀವೇ ನಿರ್ಧಾರಕ್ಕೆ ಬಂದು ಅವುಗಳನ್ನು ಹಂಚಿಕೊಳ್ಳಬಹುದು.

೪. ಗೋಪ್ಯತೆಯ ಬಗ್ಗೆ ಅನುಮತಿಯನ್ನು ಕೇಳುವ ಪತ್ರಗಳನ್ನು ಇಂಗ್ಲೀಷ್ ಮತ್ತು ಸಂವಿಧಾನದ ೮ನೇ ಪರಿಚ್ಛೇದದಲ್ಲಿರುವ ಯಾವುದೇ ಭಾಷೆಯಲ್ಲಿ ನೀಡಬೇಕಾಗುತ್ತದೆ. ಈ ಪ್ರಾವಧಾನವು GDPR ನಿಯಮಗಳಲ್ಲಿಲ್ಲ.

೫. ದತ್ತಾಂಶಗಳು ಬಹಿರಂಗಗೊಂಡ ಪ್ರತಿಯೊಂದು ಸಂದರ್ಭವನ್ನೂ ಭಾರತದ ದತ್ತಾಂಶ ಸಂರಕ್ಷಣಾ ಮಂಡಳಿ ಮತ್ತು ಪ್ರತ್ಯೇಕ ದತ್ತಾಂಶ ಅಧಿಕಾರಿಗೆ ಕಡ್ಡಾಯವಾಗಿ ವರದಿ ಮಾಡಬೇಕು. ಆದರೆ GDPRನಲ್ಲಿ ಇದು ದತ್ತಾಂಶದ ಮಹತ್ವಕ್ಕನುಗುಣವಾಗಿ ಹಲವು ಮಟ್ಟಗಳಲ್ಲಿ ನಿರ್ವಹಿಸಲ್ಪಡುತ್ತದೆ.

೬. ದತ್ತಾಂಶ ನ್ಯಾಸಕರ್ತರಲ್ಲಿ ಸಾಮಾನ್ಯ ಮತ್ತು ಮಹತ್ವದ ದತ್ತಾಂಶಗಳ ನ್ಯಾಸಕರ್ತರು ಎಂಬ ಎರಡು ವರ್ಗಗಳಿವೆ. ದತ್ತಾಂಶಗಳ ಸೂಕ್ಷ್ಮತೆಗನುಗುಣವಾಗಿ ನ್ಯಾಸಕರ್ತರು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. GDPRನಲ್ಲಿ ಈ ರೀತಿಯ ಪ್ರಾವಧಾನವಿಲ್ಲ.

೭. DPDP ಕಾಯಿದೆಯಲ್ಲಿ ೧೮ ವರ್ಷಕ್ಕೆ ಮೇಲ್ಪಟ್ಟ ವಯೋಮಾನದವರಿಂದ ಅನುಮತಿಪತ್ರವನ್ನು ಪಡೆಯಬೇಕು. ಆದರೆ, GDPR ನಲ್ಲಿ ಈ ಮಿತಿಯು ೧೬ ವರ್ಷ ಮತ್ತು ಕೆಲವು ಸಂದರ್ಭಗಳಲ್ಲಿ ೧೩ ವರ್ಷ ಎಂದಿದೆ.

೮. DPDP ಕಾಯಿದೆಯಲ್ಲಿ ದತ್ತಾಂಶ ಸಂಸ್ಕರಣೆಯಲ್ಲಿ ತೊಡಗಿರುವವರಿಗೆ ದಾಯಿತ್ವವಿರುವುದಿಲ್ಲ. ಈ ಬಗ್ಗೆ ದತ್ತಾಂಶ ನ್ಯಾಸಕರ್ತನು ಅವರ ಜೊತೆಗೆ ಪ್ರತ್ಯೇಕ ಒಪ್ಪಂದವನ್ನು ಮಾಡಿಕೊಳ್ಳಬೇಕಾಗುತ್ತದೆ. ಆದರೆ, GDPR ನಿಯಮಗಳಲ್ಲಿ ದತ್ತಾಂಶ ಸಂಸ್ಕರಣೆಯನ್ನು ಮಾಡುವವರೂ ದಾಯಿತ್ವ ಹೊಂದಿರುತ್ತಾರೆ.

**ಕುಂದುಕೊರತೆಗಳ ಸಮಾಧಾನ:** ಇದು ಕೆಲವು ಹಂತಗಳಲ್ಲಿ ನಡೆಯುವ ಪ್ರಕ್ರಿಯೆ. ವ್ಯಕ್ತಿಗಳು ದೂರುಗಳನ್ನು ಮೊದಲಿಗೆ ದತ್ತಾಂಶಗಳನ್ನು ಸಂಸ್ಕರಿಸುವವರ ಹತ್ತಿರ, ನಂತರ ದತ್ತಾಂಶ ಸಂರಕ್ಷಣಾ ಮಂಡಳಿಯ ಹತ್ತಿರ ಕೊಂಡೊಯ್ಯಬಹುದು. ನಂತರ ಮೇಲ್ಮನವಿಯನ್ನು TD-SAT ನ್ಯಾಯಮಂಡಳಿಗೆ ಸಲ್ಲಿಸಬಹುದು. ಅಂತಿಮವಾಗಿ ಸರ್ವೋಚ್ಚ ನ್ಯಾಯಾಲಯವನ್ನೂ ಸಂಪರ್ಕಿಸಬಹುದು. ಸಣ್ಣಪುಟ್ಟ ವಿಷಯಗಳನ್ನು ಸಂಧಾನದ ಮೂಲಕ ಬಗೆಹರಿಸಿಕೊಂಡು ನಂತರ ದತ್ತಾಂಶ ಸಂರಕ್ಷಣಾ ಮಂಡಳಿಗೆ ವರದಿ ಸಲ್ಲಿಸುವ ಅವಕಾಶವೂ ಇದೆ.

DPDP ಕಾಯಿದೆಯನ್ನು ಉಲ್ಲಂಘಿಸಿದರೆ ೨೫೦ ಕೋಟಿ ರೂಪಾಯಿಗಳ ವರೆಗೆ ದಂಡ ವಿಧಿಸಬಹುದು. ದತ್ತಾಂಶ ಸಂರಕ್ಷಣಾ ಮಂಡಳಿಗೆ ಮಾಹಿತಿ ನೀಡಲು ವಿಫಲರಾದರೆ ಅಥವಾ ಅಂತಹ ಉಲ್ಲಂಘನೆಯಿಂದ ವ್ಯಕ್ತಿಗಳಿಗೆ ಹಾನಿಯಾಗಿದ್ದರೆ ಹೆಚ್ಚುವರಿಯಾಗಿ ೨೦೦ ಕೋಟಿ ರೂಪಾಯಿಗಳ ದಂಡವನ್ನೂ ವಿಧಿಸಬಹುದು. ಈ ದಂಡದ ಮೊತ್ತವು ಸರಕಾರದ ಖಜಾನೆಗೆ ಜಮೆಯಾಗುತ್ತದೆ. ಸುಳ್ಳು ಮಾಹಿತಿ ನೀಡುವ ಮತ್ತು ಅವುಗಳನ್ನು ಸ್ವೀಕರಿಸುವ ವ್ಯಕ್ತಿಗಳು ೧೦೦೦೦ ರೂಪಾಯಿಗಳ ದಂಡವನ್ನು ಪಾವತಿಸಲು ಬಾಧ್ಯಸ್ಥರಾಗುತ್ತಾರೆ.

◆

# ಬಸವತತ್ತ್ವದ ನಿಜವಾದ ಅನುಯಾಯಿ

ನಾನು ಕಂಡಂತೆ



ಅನಂತಕುಮಾರ್



**ಡಾ. ಮಹಾಂತೇಶ ಬಿರಾದಾರ**
ಸಾರ್ವಜನಿಕ ಸಂಪರ್ಕಾಧಿಕಾರಿಗಳು
ಬಿಎಲ್‌ಡಿಇ ಸಂಸ್ಥೆ

**1992** ಏಪ್ರಿಲ್ ತಿಂಗಳಲ್ಲಿ ಭಾರತೀಯ ಜನತಾ ಪಕ್ಷ ಮೊದಲ ಬಾರಿಗೆ ಅಂಬೇಡ್ಕರ್ ಜಯಂತಿಯನ್ನು ರಾಜ್ಯಮಟ್ಟದಲ್ಲಿ ಹಮ್ಮಿಕೊಂಡಿತ್ತು. ವಿಜಯಪುರ ಜಿಲ್ಲಾ ಬಿಜೆಪಿ ಕಾರ್ಯದರ್ಶಿಯಾಗಿದ್ದ ಬಸನಗೌಡರೊಂದಿಗೆ ನಾವು ಏಳೆಂಟು ಜನ ರೈಲಿನಲ್ಲಿ ಪ್ರಯಾಣಿಸಿ ಹಿಂದಿನ ದಿನವೇ ಬೆಂಗಳೂರು ತಲುಪಿದ್ದೆವು. ಅಂದು ರಾತ್ರಿ ಮರಿಗೌಡ ಸಭಾಂಗಣದ ಟೇಬಲ್‌ಗಳ ಮೇಲೆಯೇ ಮಲಗಿದ್ದೆವು. ಮರುದಿನ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷರಾಗಿ ಬಂಗಾರು ಲಕ್ಷ್ಮಣ್ ಅವರು ಭಾಷಣ ಮಾಡಿದ್ದರು. ಬಹಳ ಚೆನ್ನಾಗಿ ನಡೆದ ಆ ಕಾರ್ಯಕ್ರಮವನ್ನು ಸಂಘಟಿಸಿದ್ದವರು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿದ್ದ ಅನಂತಕುಮಾರ್ ಅವರು.

ಕಾರ್ಯಕ್ರಮ ಮುಗಿದ ನಂತರ ಒಂದೆರಡು ದಿನ ಬೆಂಗಳೂರಿನಲ್ಲಿ ಉಳಿದುಕೊಂಡು ಹೋಗುವುದು ಎಂದು ಮೊದಲೇ ತೀರ್ಮಾನಿಸಿದ್ದೆವು. ನಮ್ಮ ಬಳಿ ಹೆಚ್ಚು ಹಣವೂ ಇರಲಿಲ್ಲ. ವಾಸ್ತವ್ಯಕ್ಕೆ ವ್ಯವಸ್ಥೆ ಇರಲಿಲ್ಲ. ಏನು ಮಾಡುವುದು? ಎಂದು ಬಸನಗೌಡರು ಮತ್ತು ನಾವು ಅಲ್ಲಿ ಇಲ್ಲಿ ತಿರುಗಾಡುತ್ತಿದ್ದಾಗ ಪಕ್ಷದ ಮೆಟಡೋರ್ ವಾಹನದಲ್ಲಿ ಕುಳಿತು ಹೊರಟಿದ್ದ ಅನಂತಕುಮಾರ್ ಅವರು ಬಸನಗೌಡರನ್ನು ನೋಡಿ ವಾಹನದಿಂದ ಇಳಿದು ಬಂದು "ಕಾರ್ಯಕ್ರಮ ಹೇಗಿತ್ತು? ಇಂದು ಇರುತ್ತೀರಾ ಅಥವ ವಾಪಸ್ ಬಿಜಾಪುರಕ್ಕೆ ಹೋಗುತ್ತೀರಾ" ಎಂದರು. ನಾವು "ಕಾರ್ಯಕ್ರಮ ಚೆನ್ನಾಗಿತ್ತು. ಒಂದೆರಡು ದಿನ ಇಲ್ಲಿ ಇರುತ್ತೇವೆ. ಆದರೆ ವಾಸ್ತವ್ಯ ವ್ಯವಸ್ಥೆ ಇಲ್ಲ" ಎಂದಾಗ "ನೀವು ಕೇಶವಕೃಪಾಗೆ ಹೋಗಿ. ನಾನು ಹೇಳುತ್ತೇನೆ. ಉಳಿದುಕೊಳ್ಳಲು ವ್ಯವಸ್ಥೆ ಮಾಡುತ್ತಾರೆ" ಎಂದು ಹೇಳಿ ಎಲ್ಲ ಅನುಕೂಲವನ್ನೂ ಮಾಡಿಕೊಟ್ಟರು. ನಾವು ಎರಡು ದಿನ ಬೆಂಗಳೂರಲ್ಲಿ ತಂಗಿ ಸುತ್ತಾಡಿ ಸುಖಸಾಗರ ಹೋಟೆಲಿನಲ್ಲಿ 25 ರೂಪಾಯಿ ಫುಲ್‌ಮೀಲ್ ಸವಿದದ್ದು ಇಂದಿಗೂ ನೆನಪಿನಲ್ಲಿದೆ.

1994ರಲ್ಲಿ ವಿಜಯನಗರದ ವಿದ್ಯಾರ್ಥಿ ಪರಿಷತ್ ಕಾರ್ಯದರ್ಶಿಯಾಗಿದ್ದ ನಾನು ಮಂಡ್ಯದಲ್ಲಿ ಜರುಗಿದ ಪರಿಷತ್ ರಾಜ್ಯ ಕಾರ್ಯಕಾರಿಣಿ ಸಮಿತಿ ಸಭೆಯಲ್ಲಿ ಭಾಗವಹಿಸಿದ್ದೆ. ಮೂರು ದಿನಗಳ ಸಭೆ. ರಾತ್ರಿ ಊಟ ಮಾಡಿ ಮಲಗಿದ್ದಾಗ ಒಬ್ಬ ಹಿರಿಯರು ಬಂದು ನನ್ನನ್ನು ಎಬ್ಬಿಸಿ "ಮುಖ್ಯ ವ್ಯಕ್ತಿ ಒಬ್ಬರು ಬರುತ್ತಿದ್ದಾರೆ. ತುರ್ತು ಸಭೆ ಇದೆ" ಎಂದರು. ನಾನು ಎದ್ದು ಮುಖ ತೊಳೆದುಕೊಂಡು ಕೋಣೆಗೆ ಹೋದಾಗ ಅಲ್ಲಿ ಜಿ. ಆರ್. ಜಗದೀಶ್, ಕೆ.ಎನ್. ರಘುನಂದನ್, ಅರವಿಂದ್ ಲಿಂಬಾವಳಿ, ಅನೂಪ್ ದೇಶಪಾಂಡೆ, ಕೆ.ಎನ್. ಮಂಜುಳಾ ಮತ್ತಿತರ ಪ್ರಮುಖರು ಸೇರಿದ್ದರು. ರಾತ್ರಿ 11 ಗಂಟೆ. ಆಗ ಅಲ್ಲಿಗೆ ಬಂದವರು ಅನಂತಕುಮಾರ್. ಅದಾಗಲೇ ಬಿಜೆಪಿಯಲ್ಲಿ ರಾಜ್ಯನಾಯಕರಾಗಿ ರೂಪುಗೊಂಡಿದ್ದ ಅನಂತಕುಮಾರ್ ಅವರು ನಮಗೆ 'ವಿದ್ಯಾರ್ಥಿ ಪರಿಷತ್ತಿನ ಹೋರಾಟಗಳನ್ನು ಸಂಘಟಿಸುವುದು ಹೇಗೆ?' ಎಂದು ಪಾಠ ಮಾಡಿದರು. ತಮ್ಮ ಮೈಸೂರು ಪ್ರವಾಸದಿಂದ ಬೆಂಗಳೂರಿಗೆ ಹಿಂದಿರುಗುವ ಮಾರ್ಗದಲ್ಲಿ ಮಂಡ್ಯದಲ್ಲಿ ವಿದ್ಯಾರ್ಥಿ ಪರಿಷತ್ ಕಾರ್ಯಕಾರಿಣಿ ಸಭೆ ನಡೆಯುತ್ತಿದೆ ಎಂದು ತಿಳಿದ ಅನಂತಕುಮಾರ್ ಅವರು ಅಲ್ಲಿಗೆ ಆಗಮಿಸಿ ಪ್ರಮುಖರೊಂದಿಗೆ ಬೈಠಕ್ ನಡೆಸಿದ್ದರು. ಅಂದು ನಡೆದ ಚರ್ಚೆ "ಸೇವ್ ಕ್ಯಾಂಪಸ್" ಆಂದೋಲನವಾಗಿ ರೂಪುಗೊಂಡಿತು.

1996ರ ಲೋಕಸಭೆ ಚುನಾವಣೆಯಲ್ಲಿ ಬಸನಗೌಡ ಪಾಟೀಲ್ ಅವರು ವಿಜಯಪುರದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಆ ನಿಮಿತ್ತ ಪಕ್ಷದ ಮಲ್ಲೇಶ್ವರಂ ಕಚೇರಿಯಲ್ಲಿ ಸಾಮಗ್ರಿ ಪಡೆದುಕೊಳ್ಳಲು ನಾನು ಬಂದಿದ್ದೆ. ಆಗ ಅನಂತಕುಮಾರ್ ಅವರು ಅಲ್ಲಿದ್ದರು. ಅದೇ ಸಮಯದಲ್ಲಿ ಕೋಲಾರ/ಚಿಕ್ಕಬಳ್ಳಾಪುರ ಭಾಗದ ಲೋಕಸಭಾ ಅಭ್ಯರ್ಥಿಯೊಬ್ಬರು ಅಲ್ಲಿಗೆ ಬಂದರು. ಅವರನ್ನು ನೋಡಿದ ಅನಂತಕುಮಾರ್ ಅವರು "ಅರರೆ, ಸದ್ಯ ನೀವು ಜಿಲ್ಲೆಯ ಹಳ್ಳಿಗಳಲ್ಲಿ ಪ್ರಚಾರದಲ್ಲಿ ಇರಬೇಕಿತ್ತಲ್ಲವೇ" ಎಂದು ಹಳ್ಳಿಗಳ ಹೆಸರುಗಳನ್ನು ಪಟಪಟನೆ ತೆಲುಗಿನಲ್ಲಿ ಹೇಳಿದ್ದು ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಉಳಿದಿದೆ. ಅಗಾಧ ನೆನಪಿನ ಶಕ್ತಿಯ ಅನಂತಕುಮಾರ್ ಅವರು ಬಹುಭಾಷಾ ಪಂಡಿತರೂ ಆಗಿದ್ದರು.

2000ದಲ್ಲಿ ವಿಜಯಪುರದಲ್ಲಿ ಬಂಥನಾಳ ಸಂಗನಬಸವ ಶಿವಯೋಗಿಗಳ ಜನ್ಮ ಶತಮಾನೋತ್ಸವವನ್ನು ಆಚರಿಸಲಾಗಿತ್ತು. ಆಗ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಅವರು ಆಗಮಿಸಿದಾಗ ನಾವು ಅವರನ್ನು ಸ್ವಾಗತಿಸಿ, ಸಿದ್ದೇಶ್ವರ ಆಶ್ರಮಕ್ಕೆ ಕರೆದುಕೊಂಡು ಬಂದೆವು. ಸಿದ್ದೇಶ್ವರ ಶ್ರೀಗಳ ಮತ್ತು ಸುತ್ತೂರು ಶ್ರೀಗಳ ದರ್ಶನ ಪಡೆದ ಅನಂತಕುಮಾರ್ ಶ್ರೀಗಳ ಮುಂದೆ ನೆಲದ ಮೇಲೆ ಕುಳಿತು ಅವರ ಬಳಿ ಬಹಳ ಹೊತ್ತು ಮಾತನಾಡಿದರು. ಕೇಂದ್ರದಲ್ಲಿ ಸಚಿವರಾಗಿದ್ದರೂ ಗುರುಗಳ ಸಮ್ಮುಖದಲ್ಲಿ ನೆಲದಮೇಲೆ ಹಾಸಿದ್ದ ಜಮಖಾನೆಯ ಮೇಲೆ ಕುಳಿತ ಅನಂತಕುಮಾರ್ ಅವರು ಪೂಜ್ಯರಿಗೆ ನೀಡುತ್ತಿದ್ದ ಗೌರವ ಕಂಡು ಅವರ ಬಗ್ಗೆ ಹೆಮ್ಮೆ ಎನಿಸಿತು. ಅನಂತಕುಮಾರ್ ಅವರು ನಮ್ಮ ನಾಯಕ ಎಂದು ಹೇಳಿಕೊಳ್ಳಲು ನಮಗೆ ಗರ್ವ ಎನಿಸುತ್ತದೆ. ಜಾತಿ ಮತ ಭೇದವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದ್ದ ಅವರು ನಿಜವಾದ ಅರ್ಥದಲ್ಲಿ ಬಸವತತ್ವದ ಅನುಯಾಯಿ. ಸದಾ ನಗುಮುಖ, ಪ್ರೀತಿ, ವಾತ್ಸಲ್ಯ ತುಂಬಿದ ಮಾತು, ಇದನ್ನೇ ಅವರು ಪಕ್ಷದ ಕಾರ್ಯಕರ್ತರಿಗೆ, ಅವರ ಅಭಿಮಾನಿಗಳಿಗೆ ಹಂಚಿದ್ದರು. ಇಂದು ಪಕ್ಷದ ಸಿದ್ಧಾಂತಗಳು ಬೇರೆಯೇ ಆಗಿದ್ದರೂ, ಅನಂತಕುಮಾರ್ ಅವರು ನಮಗೆ ಆದರ್ಶವಾಗಿಯೇ ಉಳಿದಿದ್ದಾರೆ ಮತ್ತು ಅವರೆಡೆಗಿನ ನಮ್ಮ ಪ್ರೀತಿ ಹಾಗೆಯೇ ಉಳಿದಿದೆ. ◆

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ನವೆಂಬರ್ ನಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ ಮ: 2.00 ರಿಂದ 3.00 | 4500 | 2,25,150 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ ಮ: 12.30 ರಿಂದ 1.30 | 3000 | 1,47,600 |
| 3 | ನಗರ್ತಪೇಟೆಯ ನಗರೇಶ್ವರ ದೇವಸ್ಥಾನ ಮ: 12.30 ರಿಂದ 1.30 | 2600 | 1,26,100 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು, ಬೆಂಗಳೂರು ಮ: 12.30 ರಿಂದ 1.30 | 4500 | 1,05,600 |
| 5 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು ಮ: 12:30ರಿಂದ 1:30ರವರೆಗೆ | 4500 | 61,370 |
| 6 | ಶ್ರೀ ಈಶ್ವರ ದೇವಸ್ಥಾನ, ರೈಲ್ವೆ ಸ್ಟೇಷನ್ ರಸ್ತೆ, ಹುಬ್ಬಳ್ಳಿ ಮ: 12:30ರಿಂದ 1:30ರವರೆಗೆ | 2600 | 42,850 |
| 7 | ಬಸವೇಶ್ವರ ಆಸ್ಪತ್ರೆಯ ಸಮೀಪ, ಸೇಡಂ ರಸ್ತೆ, ಕಲಬುರ್ಗಿ ಮ: 12:30ರಿಂದ 1:30ರವರೆಗೆ | 7500 | 37,800 |
| 8. | ಮಹಾತ್ಮ ಗಾಂಧೀಜಿ ಆಸ್ಪತ್ರೆಯ ಆವರಣ, ಜೋಧಪುರ, ರಾಜಸ್ಥಾನ. ಮ: 12:30 ರಿಂದ 2:00ವರೆಗೆ | 5200 | 12,200 |
| | ಒಟ್ಟು ಅಂದಾಜು | **34,400** | **758,670** |

# ಕ್ಯಾನ್ಸರ್ ಪೀಡಿತ ರಾಜ್ಯ ಪಾಲಿಟೆಕ್ನಿಕ್‌ಗಳು

**( 49ನೇ ಸಂಚಿಕೆಯಿಂದ ಮುಂದುವರೆದಿದೆ. ಕರಾಳಪತ್ರದ ಅಂಕಿಅಂಶಗಳನ್ನು ೧೯೮೦-೮೫ರಲ್ಲಿದ್ದಂತೆ ಎಂದು ಪರಿಗಣಿಸಬೇಕಾಗಿ ಕೋರಿದೆ)**

**ಪುರಾತನ ಪಠ್ಯಕ್ರಮ**

ಈಗ ಜಾರಿಯಲ್ಲಿರುವ ಪಠ್ಯಕ್ರಮ 1955ರದು. 21ನೇ ಶತಮಾನಕ್ಕೆ ಧಾವಿಸುತ್ತಿರುವ, ಪ್ರತಿಭೆಯನ್ನು ರಪ್ಪು ಮಾಡಲಿರುವ ನಮ್ಮ ಪಠ್ಯ ಕ್ರಮದ ಸ್ಥಿತಿ ಇದು.

1958 ಮತ್ತು 1962ರಲ್ಲಿ ಪಠ್ಯಕ್ರಮದಲ್ಲಿ ಅಲ್ಪಸ್ವಲ್ಪ ತೇಪೆಹಚ್ಚುವ ಪುನರ್ವಿಮರ್ಶೆಯಾಯಿತು; 1982ರಲ್ಲಿ ಹೊಸ ಪಠ್ಯಕ್ರಮ ರೂಪಿತವಾಗಿದ್ದು ಹಣದ ಕೊರತೆಯಿಂದ ಜಾರಿಗೆ ಬರಲು ವಿಫಲವಾಗಿದೆ. ಬೆಂಗಳೂರು ನಗರದ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿ ಮಾತ್ರ ಹೊಸ ಪಠ್ಯಕ್ರಮ ಇದೆ. ಉಳಿದ ಯಾವುದೇ ಸರ್ಕಾರಿ ಮತ್ತು ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಹೊಸ ಪಠ್ಯಕ್ರಮ ಜಾರಿಗೆ ಬಂದಿಲ್ಲ. ಹಣದ ಕೊರತೆಯ ಕಾರಣವನ್ನು ಮುಂದುಮಾಡಿ ಖಾಸಗಿ ಪಾಲಿಟೆಕ್ನಿಕ್‌ಗಳೂ ಕೂಡ (ಹೊಸದಾಗಿ ಆರಂಭವಾದ ಪಾಲಿಟೆಕ್ನಿಕ್‌ಗಳ ಸಹಿತ) ಹಳೆಯ ಪಠ್ಯ ಕ್ರಮವನ್ನು ಅನುಸರಿಸುತ್ತಿವೆ. ಅಪ್ಪ ನೆಟ್ಟ ಆಲದಮರಕ್ಕೆ ನೇಣು ಹಾಕಿಕೊಂಡು ಸಾಯುವ ಜನ ನಾವೇ? ಅಥವಾ ನಮ್ಮ ಆಡಳಿತಗಾರರು ಈ ಹಳೆಯ ಶಿಥಿಲ ಗಿಡದ ಬೋಳು ಕೊಂಬೆಗಳಿಗೆ ರಾಜ್ಯದ ಸಾವಿರಾರು ನಿರಪರಾಧಿ ವಿದ್ಯಾರ್ಥಿಗಳ ಬಾಳನ್ನು ಭವಿಷ್ಯವನ್ನು ನೇಣುಗಟ್ಟುತ್ತಿದ್ದಾರೆಯೇ???

**ಇಲ್ಲಿದೆ, ಘೋರಸ್ಥಿತಿ**

ಬಹುತೇಕ ಖಾಸಗಿ ಪಾಲಿಟೆಕ್ನಿಕ್‌ಗಳು ಪ್ರಾಥಮಿಕ ಅವಶ್ಯಕತೆಗಳಾದ ಕಟ್ಟಡ, ಉಪಕರಣ, ಗ್ರಂಥಾಲಯ, ಅಧ್ಯಾಪಕರು ಮುಂತಾದ ಕೊರತೆಗಳಿಂದ ಸಂತ್ರಸ್ತವಾಗಿವೆ. ಇವು ತಾಂತ್ರಿಕ ಶಿಕ್ಷಣದ ಕೇಂದ್ರಗಳಾಗಿರದೇ ವಾಣಿಜ್ಯಸಂಸ್ಥೆಗಳಾಗಿವೆ. ಶಿಕ್ಷಣತಜ್ಞರು ಶಿಕ್ಷಣ ಆಡಳಿತಗಾರರು ಮತ್ತು ಶಿಕ್ಷಣಪ್ರೇಮಿಗಳು ಬೆಳೆಸಬೇಕಾದ ಪಾಲಿಟೆಕ್ನಿಕ್ ಶಿಕ್ಷಣ ರಾಜಕೀಯ ಪುಡಾರಿಗಳ ದುರಾಸೆಯ ಸಾಧನವಾಗಿ ನರಳುತ್ತಿದೆ. ಕೆಳಗೆ ನೀಡಿರುವ ಕೆಲ ಉದಾಹರಣೆಗಳು ಈ ಸ್ಥಿತಿಯತ್ತ ದಿಕ್ಸೂಚಿ.

1) ಹುಬ್ಬಳ್ಳಿಯ ಸರಕಾರಿ ನೌಕರರ ಸಂಘದ ಪಾಲಿಟೆಕ್ನಿಕ್ ಹಿಟ್ಟಿನ ಗಿರಣಿ (Flour Mill) ನಲ್ಲಿ ನಡೆಯುತ್ತಿದೆ.

2) ರಾಯಚೂರಿನ ಕಲ್ಲೂರು ಪಾಲಿಟೆಕ್ನಿಕ್ 'ಗಾಂಧಿವಾದ'ದಿಂದ ಪ್ರೇರಿತವಾಗಿ ಚಾಪೆಯ ಚಪ್ಪರ ಹಾಗೂ ಎ. ಪಿ. ಎಂ. ಸಿ. ಯ ಒಂದು ಗೋಡೌನಿನಲ್ಲಿ ಕೊಳೆಯುತ್ತಿದೆ.

3) ಚಿಕ್ಕಮಗಳೂರು ಜಿಲ್ಲೆಯ ಬೀರೂರು ಪಾಲಿಟೆಕ್ನಿಕ್ ಅನಾಥಾಲಯದಲ್ಲಿ ಅನಾಥವಾಗಿ ರೋದಿಸುತ್ತಿದೆ.

4) ದಾವಣಗೆರೆಯ ಮಿಲ್ಲತ್ ಪಾಲಿಟೆಕ್ನಿಕ್ ಅವಲಕ್ಕಿ ಫ್ಯಾಕ್ಟರಿಯಲ್ಲಿ ತಾಂತ್ರಿಕ ಶಿಕ್ಷಣವನ್ನು ಕುಟ್ಟಿ ಹಾಕುತ್ತಿದ್ದರೆ ಬೆಂಗಳೂರಿನ ಅಲ್ ಖತೀಬ್ ಪಾಲಿಟೆಕ್ನಿಕ್ ತಾರಸಿ ಮೇಲೆ ಚಪ್ಪರದಲ್ಲಿ ವಿಶ್ರಮಿಸಿದೆ. ದಯವಿಟ್ಟು ನೀವೇ ಹೋಗಿ ನೋಡಿರಿ.

5) ಮೈಸೂರಿನ ಡಿ. ಬನುಮಯ್ಯ ಪಾಲಿಟೆಕ್ನಿಕ್ ಪ್ರಾಚಾರ್ಯರ ಕೊಠಡಿಯ ವ್ಯಾಪ್ತಿ ಮತ್ತು ವಿಸ್ತೀರ್ಣ ಪವಾಡ ಸದೃಶವಾದದ್ದೇ. ಏಕೆಂದರೆ ಅದರಲ್ಲಿಯೇ ಅಧ್ಯಾಪಕರ ಕೊಠಡಿ , ಕಾರ್ಯಾಲಯ, ಗ್ರಂಥಾಲಯ, ವಾಚನಾಲಯಗಳಿವೆ.

6) ಕಲ್ಬುರ್ಗಿಯ ರಾಜಾಪೂರ್ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಪ್ರಪಂಚಜ್ಞಾನದಿಂದ ಸರ್ವಜ್ಞರಾಗುತ್ತಿದ್ದಾರೆ. ಮೆಕ್ಯಾನಿಕಲ್ ಮತ್ತು ಆಟೋಮೊಬೈಲ್ ಕೋರ್ಸ್‌ಗಳಲ್ಲಿ ತೃತೀಯ ವರ್ಷದಲ್ಲಿ ಓದುತ್ತಿದ್ದರೂ ಅವರಿನ್ನೂ ಉಪಕರಣಗಳ ಹತ್ತಿರ ಸುಳಿಯುವ ಗೋಜಿಗೆ ಹೋಗಿಲ್ಲ. ಚಿತ್ರ ಮಾತ್ರ ನೋಡಿದ್ದಾರೆ. ಶಿಕ್ಷಣದ ನಂತರ ಅವರ ಜೀವನ ಚಿತ್ರವಿಚಿತ್ರವಾಗಲಿದೆ. ಹಾಲಿನ ಡೈರಿಗೆಂದು ಕಟ್ಟಿರುವ ಕಟ್ಟಡದಲ್ಲಿ ಪಾಲಿಟೆಕ್ನಿಕ್ ನಡೆಯುತ್ತಿರುವುದು ಸಂಸ್ಥೆಯ ಸ್ಥಾಪಕರ ಕಲ್ಪನಾ ಸಾಮರ್ಥ್ಯಕ್ಕೆ ದ್ಯೋತಕ.

7) ದಾಂಡೇಲಿಯ ಉಳವಿ ಚೆನ್ನಬಸವೇಶ್ವರ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಪ್ರಯೋಗಾಲಯ ಸೌಲಭ್ಯವಿಲ್ಲ (ಉಪಕರಣಗಳಿಲ್ಲ), ಬದುಕೇ ವಿದ್ಯಾದೇಗುಲ. ಅಲ್ಲಿನ ವಿದ್ಯಾರ್ಥಿಗಳು ಪ್ರಾಯೋಗಿಕ ತರಬೇತಿಗೋಸ್ಕರ ಸುತ್ತಲಿನ ಗ್ಯಾರೇಜುಗಳಿಗೆ ಹೋಗುತ್ತಾರೆ.

8) ಮೈಸೂರಿನ ಡಿ. ಬನುಮಯ್ಯ ಪಾಲಿಟೆಕ್ನಿಕ್‌ನಲ್ಲಿ ಆರ್ಕಿಟೆಕ್ಚರ್ ಹಾಗೂ ಇನ್‌ಸ್ಟ್ರುಮೆಂಟೇಶನ್ ಟೆಕ್ನಾಲಜಿ ವಿಭಾಗಗಳನ್ನು ಕಲಿಸಲು ಮೊದಲು ಅನುಮತಿ ಪಡೆದು ಅವುಗಳನ್ನು ಕಲಿಸದೆ, ವಿದ್ಯಾರ್ಥಿ ಪರಿಷತ್ ಇದನ್ನು ಬೆಳಕಿಗೆ ತಂದ ನಂತರ ಹೊಸ ಅನುಮತಿಯಿಂದ ಕಂಪ್ಯೂಟರ್ ಸೈನ್ಸ್ ಹಾಗೂ ಎಲೆಕ್ಟ್ರಾನಿಕ್ಸ್ ಅನ್ನು ಕಲಿಸಲಾಗುತ್ತಿದೆ.




9) ಅನೇಕ ಪವಾಡಗಳ ತಾಣವಾಗಿರುವ ಪಾಲಿಟೆಕ್ನಿಕ್ ಶಿಕ್ಷಣರಂಗದಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಥಿನಿಯರಿಗಾಗಿ ನಡೆಸಲ್ಪಡುತ್ತಿರುವ ಪಾಲಿಟೆಕ್ನಿಕ್‌ಗಳಲ್ಲಿ ಏಕಾಗ್ರಚಿತ್ತದಿಂದ ಅಧ್ಯಯನ ಮಾಡುತ್ತಿರುವರು. ಶಿವಮೊಗ್ಗದ ಡಿ.ವಿ.ಎಸ್. ಮತ್ತು ತುಮಕೂರಿನ ಆರ್ಯಭಾರತಿ ಪಾಲಿಟೆಕ್ನಿಕ್‌ಗಳು ಮಹಿಳೆಯರಿಗಾಗಿ ಮೀಸಲಾಗಿದ್ದು ಅಲ್ಲಿಗೆ ಭೇಟಿಕೊಟ್ಟರೆ ನಿಮಗೆ ಆಶ್ಚರ್ಯ ಕಾದಿದೆ. ನಿಮ್ಮ ಕಂಗಳನ್ನೇ ನೀವು ನಂಬಲಾರಿರಿ. ಅಲ್ಲಿ ಪುರುಷರೂ ಇದ್ದಾರೆ.

10) ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಗ್ರಾಮೀಣ ಪ್ರದೇಶವಾದ ನಿಟ್ಟೂರಿನಲ್ಲಿ ಪಾಲಿಟೆಕ್ನಿಕ್ ಆರಂಭಿಸಲು ಅನುಮತಿ ಪಡೆದು ಅಲ್ಲಿ ಪ್ರಾರಂಭಿಸದೆ ಜಿಲ್ಲಾ ಕೇಂದ್ರವಾದ ಬೀದರಿನಲ್ಲಿ ನಿಟ್ಟೂರು ಶಿಕ್ಷಣ ಸಂಸ್ಥೆಯವರು ಪಾಲಿಟೆಕ್ನಿಕ್ ಆರಂಭಿಸಿದ್ದಾರೆ. 'ಎಲ್ಲಾ ಮಾಯವೋ ಶಿವನೇ...... ಎಲ್ಲ ಮಾಯವೋ'....

11) ಹುಬ್ಬಳ್ಳಿಯ ಸರ್ಕಾರಿ ನೌಕರರ ಸಂಘದ ಪಾಲಿಟೆಕ್ನಿಕ್‌ನ ಪ್ರಾಚಾರ್ಯರು ಹುದ್ದೆಗೆ ಅಗತ್ಯವಾದ ತಾಂತ್ರಿಕ ಪದವೀಧರರಾಗಿರದೆ ಕಲಾ ಪದವೀಧರರು; ಇದೇ ಘನ ಉದಾಹರಣೆ ಆಧಾರದ ಮೇಲೆ ವೈದ್ಯಕೀಯ ಕಾಲೇಜುಗಳಿಗೆ ತಾಂತ್ರಿಕ ಪದವೀಧರರನ್ನು ಪ್ರಾಚಾರ್ಯರನ್ನಾಗಿ ನೇಮಿಸಿದರೆ ಹೇಗೆ?

ಅನೇಕ ಖಾಸಗೀ ಸಂಸ್ಥೆಗಳಲ್ಲಿ ತಕ್ಕ ಪ್ರಮಾಣದಲ್ಲಿ ಅಧ್ಯಾಪಕರಿಲ್ಲ ಹಾಗೂ ಡಿಪ್ಲೊಮಾಧರರೇ ಅಧ್ಯಾಪಕರಾಗಿರುವುದು ಗಮನಾರ್ಹ ಸಂಗತಿ.

ಪಾಲಿಟೆಕ್ನಿಕ್ ಶಿಕ್ಷಣದಲ್ಲಿ ಕನಿಷ್ಠ ತಾಂತ್ರಿಕ ತರಬೇತಿ (Technical Training) ಸೂಕ್ತವಾಗಿ ಆಗದೆ ಇರುವಾಗ ಹೆಚ್ಚು ಅನುಭವವೊದಗಿಸುವ ಕೈಗಾರಿಕಾ ಪ್ರಶಿಕ್ಷಣ (Industrial Training) ವಂತೂ ಬಹುದೂರದ ಕನಸಾಗಿದೆ

1984-85ರಲ್ಲಿ ಡಿಪ್ಲೊಮಾಧರರ ಅವಶ್ಯಕತೆಗಿಂತ ಹೆಚ್ಚಾದ ಸಂಖ್ಯೆ 8800 ಇರುತ್ತದೆಂದು 1983ರಲ್ಲಿ ಪ್ರಕಟವಾದ ಶ್ವೇತಪತ್ರ ಪ್ರಕಟಿಸಿತ್ತು. ಇಂಜಿನಿಯರಿಂಗ್ ಪದವೀಧರರು ಮತ್ತು ಡಿಪ್ಲೊಮಾಧರರ ನಡುವೆ ಇರಬೇಕಾದ ಪರಿಮಾಣ 1:3 ಅಥವಾ 1:4 ಆದರೆ ನಮ್ಮ ಘನಸರ್ಕಾರದ ಯೋಜನಾರಾಹಿತ್ಯದಿಂದ ಇದು 1984-85ರಲ್ಲಿ 1.75:1 ಆಗುವುದಿದೆ ಎಂದು ಶ್ವೇತಪತ್ರ ಹೇಳಿದೆ. (ಶ್ವೇತಪತ್ರ ಪುಟ 7, ತಾಂತ್ರಿಕ ಸಂಸ್ಥೆಗಳ ಮೇಲೆ)

ರಾಜ್ಯದ ವೃತ್ತಿಪರ ಶಿಕ್ಷಣ ತ್ರಿಶಂಕು ಸ್ಥಿತಿಯಲ್ಲಿದೆ. 1977ರ ಜುಲೈನಲ್ಲಿ ಆರಂಭವಾದ ಈ ಶಿಕ್ಷಣದಡಿಯಲ್ಲಿ ಈಗ ರಾಜ್ಯದ 20 ಜಿಲ್ಲೆಗಳ 138 ಕಾಲೇಜುಗಳಲ್ಲಿ 222 ಕೋರ್ಸ್‌ಗಳನ್ನು ಕಲಿಸಲಾಗುತ್ತಿದೆ. 1981-82ರಲ್ಲಿ 2951 ದಾಖಲಾತಿಯಿದ್ದ ಈ ವಿಭಾಗದಲ್ಲಿ 85-86ರಲ್ಲಿ 5477 ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ.

◆



## ಶ್ರದ್ಧಾಂಜಲಿ

ಅದಮ್ಯ ಚೇತನದ ಕಾರ್ಯಕರ್ತೆಯಾಗಿ ಅನೇಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೇವೆ ಸಲ್ಲಿಸುತ್ತಿದ್ದ **ಶ್ರೀಮತಿ ಜಯಲಕ್ಷ್ಮಿಪತಿ** ಅವರು ಇತ್ತೀಚೆಗೆ ನಿಧನರಾಗಿರುತ್ತಾರೆ.ಅವರ ಅಗಲಿಕೆಗೆ ಸಂತಾಪ ಸೂಚಿಸುತ್ತಾ ಅದಮ್ಯ ಚೇತನದ ಪರವಾಗಿ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇವೆ.

# ಕನ್ನಡ ಚಿತ್ರರಂಗದ ಆತ್ಮಬಂಧು

- ಜಿ. ಪಿ. ನಾಗರಾಜನ್





ಅನಂತಕುಮಾರ್ ರಾಜಕೀಯವಲ್ಲದೆ ಸಿನಿಮಾರಂಗವನ್ನು ಪ್ರವೇಶಿಸಿದ್ದರೆ ಒಬ್ಬ ನಾಯಕನಟನಾಗಬಹುದಾಗಿತ್ತು. ಅವರಿಗೆ ಒಬ್ಬ ನಟನಿಗೆ ಬೇಕಾದ ಮೈಕಟ್ಟು ಇತ್ತು. ಅವರು ಚಲನಚಿತ್ರ ಕ್ಷೇತ್ರವನ್ನು ಪ್ರವೇಶಿಸದಿದ್ದರೂ ಅದರೊಂದಿಗೆ ಅವಿನಾಭಾವ ಸಂಬಂಧವನ್ನು ಬೆಳೆಸಿಕೊಂಡಿದ್ದರು. ಕನ್ನಡ ಚಲನಚಿತ್ರರಂಗದ ಬಹುತೇಕ ಕಲಾವಿದರು ಅವರ ಆಪ್ತವರ್ಗದಲ್ಲಿದ್ದರು. ಸಮಯ ಸಿಕ್ಕಾಗೆಲ್ಲ ಕನ್ನಡ ಸಿನಿಮಾ ಕಲಾವಿದರ ಬಗ್ಗೆ ಮಾತನಾಡುತ್ತಿದ್ದರು. ಅವರೊಬ್ಬ ಒಳ್ಳೆಯ ಚಿತ್ರ ವಿಮರ್ಶಕರೂ ಆಗಿದ್ದರು. ಕನ್ನಡ ಚಿತ್ರೋದ್ಯಮದ ಸಮಸ್ಯೆಗಳಿಗೆ ಸರ್ಕಾರದಿಂದ ಏನೆಲ್ಲ ಪರಿಹಾರಗಳನ್ನು ಒದಗಿಸಬಹುದಾಗಿತ್ತೋ ಅವೆಲ್ಲವನ್ನೂ ಅನಂತಕುಮಾರ್ ಸದಾ ಒದಗಿಸುತ್ತಿದ್ದರು.

ಚಲನಚಿತ್ರ ಸೆನ್ಸಾರ್ ಮಂಡಳಿ ಮತ್ತು ಕನ್ನಡ ಚಿತ್ರೋದ್ಯಮದ ನಡುವೆ ತಿಕ್ಕಾಟ ಸಾಮಾನ್ಯವಾಗಿತ್ತು. ಕನ್ನಡ ಚಿತ್ರಗಳೆಂದರೆ ಸೆನ್ಸಾರ್ ಮಂಡಳಿಗೆ ಮಲಮಕ್ಕಳನ್ನು ಕಂಡಷ್ಟೇ ಪ್ರೀತಿ. ಪ್ರಾದೇಶಿಕ ಚಲನಚಿತ್ರ ಸೆನ್ಸಾರ್ ಮಂಡಳಿಯಿಂದ ಕನ್ನಡ ಚಿತ್ರಗಳ ಬಿಡುಗಡೆಗೆ ಒಪ್ಪಿಗೆ ಪಡೆಯಬೇಕಾದರೆ ಚಿತ್ರ ನಿರ್ಮಾಪಕರು, ನಿರ್ದೇಶಕರು ಹರಸಾಹಸ ಪಡಬೇಕಿತ್ತು. ಈ ಬಗ್ಗೆ ಹಲವರು ಆಗ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಅವರ ಗಮನಕ್ಕೆ ತಂದು ನೆರವು ಕೋರಿದಾಗ ಕೂಡಲೇ ಸ್ಪಂದಿಸಿದ ಅನಂತಕುಮಾರ್ ಸೆನ್ಸಾರ್ ಮಂಡಳಿಯವರೊಡನೆ ಚರ್ಚಿಸಿ ಕನ್ನಡ ಚಿತ್ರಗಳ ಬಿಡುಗಡೆಗೆ ವಿನಾಕಾರಣ ಆಗುತ್ತಿದ್ದ ತೊಂದರೆಗಳನ್ನು ಪರಿಹರಿಸಿದ್ದರು.

ಅದೇರೀತಿ ರಾಷ್ಟ್ರಪ್ರಶಸ್ತಿಗಳಿಗೆ ಚಿತ್ರಗಳ ಆಯ್ಕೆ, ನಿರ್ಧಾರಗಳ ವಿಚಾರದಲ್ಲೂ ಕನ್ನಡ ಚಿತ್ರಗಳಿಗೆ ಆಗುತ್ತಿದ್ದ ಅನ್ಯಾಯಗಳನ್ನು ಸರಿಪಡಿಸಲು ಅನಂತಕುಮಾರ್ ಪ್ರಶಸ್ತಿಗಳ ಪ್ರಶ್ನೆ ಬಂದಾಗ ಗುಣಮಟ್ಟವೊಂದೇ ಮಾನದಂಡವಾಗಬೇಕೆಂದು ಪ್ರತಿಪಾದಿಸಿ ಕನ್ನಡ ಚಿತ್ರಗಳಿಗೆ ನ್ಯಾಯ ಸಿಗಲು ಶ್ರಮಿಸಿದ್ದರು.

ಕನ್ನಡ ಸಿನಿಮಾ ಮತ್ತು ಕಿರುತೆರೆಯ ಕಾರ್ಮಿಕ ವರ್ಗಕ್ಕೆ ಸರ್ಕಾರದ ಯಶಸ್ವಿನಿ ಯೋಜನೆಯ ಫಲ ಸಂಬಂಧಿಸಿದ ಫಲಾನುಭವಿಗಳಿಗೆ ನಿಯತವಾಗಿ ಸರಿಯಾದ ರೀತಿಯಲ್ಲಿ ತಲುಪುತ್ತಿರಲಿಲ್ಲ. ಹಲವು ಚಿತ್ರರಂಗದ ಕಾರ್ಮಿಕ ಸಂಘಟನೆಗಳ ಅಹವಾಲನ್ನು ಕೇಳಿದ ಅನಂತಕುಮಾರ್ ಕರ್ನಾಟಕ ಕಾರ್ಮಿಕರ ಸಮಸ್ಯೆಯನ್ನು ಆಗ ಕೇಂದ್ರದಲ್ಲಿ ಕಾರ್ಮಿಕ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರ ಗಮನಕ್ಕೆ ತಂದು ಅವರೊಡನೆ ಮಾತನಾಡಿ ಸಮಸ್ಯೆಯನ್ನು ನಿವಾರಿಸಿದರು. ಅನಂತಕುಮಾರ್ ಅವರಿಗೆ ಕಾರ್ಮಿಕ ವರ್ಗದವರನ್ನು ಕುರಿತು ಇದ್ದ ಕಳಕಳಿಗೆ ಇದು ಒಂದು ನಿದರ್ಶನ.

ಆಗೆಲ್ಲಾ ಬೆಂಗಳೂರು ಮತ್ತು ಕರ್ನಾಟಕದ ಹಲವು ಭಾಗಗಳಲ್ಲಿ ತಮಿಳು, ತೆಲುಗು ಮತ್ತಿತರ ಭಾಷಾಚಿತ್ರಗಳ ಭರಾಟೆ ಹೆಚ್ಚಾಗಿತ್ತು. ಇದಲ್ಲದೆ ಇತರ ಭಾಷೆಗಳ ಚಿತ್ರಗಳು ಕನ್ನಡಕ್ಕೆ ಡಬ್ ಆಗಿಯೂ ಬರುತ್ತಿದ್ದವು. ಈ ಚಿತ್ರಗಳ ಆರ್ಭಟದಲ್ಲಿ ಕನ್ನಡ ಚಿತ್ರಗಳು ಸೊರಗುತ್ತಿದ್ದವು. ಪ್ರದರ್ಶನಗಳಿಗೆ ಚಿತ್ರ ಮಂದಿರಗಳು ಸಿಗುತ್ತಿರಲಿಲ್ಲ. ಸಂಪೂರ್ಣ ತಯಾರಾದ ಎಷ್ಟೋ ಚಿತ್ರಗಳು ಡಬ್ಬದಲ್ಲಿಯೇ ಕೊಳೆಯುತ್ತಿದ್ದ ಪ್ರಸಂಗಗಳು ಹೆಚ್ಚಾಗಿತ್ತು. ಕೆಲಸಗಾರರು, ದಿನಗೂಲಿ ಕಾರ್ಮಿಕರು ಕೆಲಸವಿಲ್ಲದೆ ತಳಮಳಿಸುವಂತಾಯಿತು. ಕನ್ನಡ ಚಿತ್ರ ನಿರ್ಮಾಪಕರೂ ಕಂಗಾಲಾಗುವ ಪರಿಸ್ಥಿತಿ ಒದಗಿತ್ತು. ಇಂತಹ ಸಮಯದಲ್ಲಿ ಕನ್ನಡ ಚಿತ್ರರಂಗಕ್ಕೆ ಆಪದ್ಬಾಂಧವರಂತೆ ಬಂದವರು ಅನಂತಕುಮಾರ್. ಅನಂತಕುಮಾರ್, ಸೆನ್ಸಾರ್ ಮಂಡಳಿಯ ಸಚಿವರಾಗಿದ್ದ ಸಚಿನ್ ಪೈಲಟ್ ಅವರನ್ನು ಸಂಪರ್ಕಿಸಿ ವಿಷಯದ ಗಂಭೀರತೆಯನ್ನು ಕೂಲಂಕಷವಾಗಿ ಚರ್ಚಿಸಿ ಕರ್ನಾಟಕಕ್ಕೆ ಡಬ್ಬಿಂಗ್ ಚಿತ್ರಗಳು ಬಾರದಂತೆ ಒಂದು ಸೂತ್ರವನ್ನು ರೂಪಿಸುವಂತೆ ಸೂಚಿಸಿ ಸಮಸ್ಯೆಗೆ ಪರಿಹಾರವನ್ನು ಒದಗಿಸಿದ್ದರು.

ಅನಂತಕುಮಾರ್ ಮತ್ತು ಅಂಬರೀಶ್ ನಡುವೆ ಸಲುಗೆ ಬೆರೆತ ಆತ್ಮೀಯ ಗೆಳೆತನವಿತ್ತು. ಇಬ್ಬರೂ ಏಕವಚನದಲ್ಲಿಯೇ ಮಾತನಾಡಿಕೊಳ್ಳುತ್ತಿದ್ದರು. ಅವರಿಬ್ಬರ ಮಾತುಗಳಲ್ಲಿ ಪರಸ್ಪರ ಕೀಟಲೆ ತುಂಬಿರುತ್ತಿತ್ತು. ಇಬ್ಬರ ನಡುವೆ ಎಷ್ಟೇ ಸಲುಗೆಯಿದ್ದರೂ ಪರಸ್ಪರ ಗೌರವಕ್ಕೆ ಎಂದೂ ಚ್ಯುತಿ ಬಂದಿರಲಿಲ್ಲ. ಇಬ್ಬರೂ ಕೇಂದ್ರದಲ್ಲಿ ಮಂತ್ರಿಗಳಾಗಿದ್ದವರು.

ಕನ್ನಡ ಚಿತ್ರರಂಗದ ಅಂಬರೀಶ್, ವಿಷ್ಣುವರ್ಧನ್, ಪುನೀತ್ ರಾಜ್‌ಕುಮಾರ್, ಜಗ್ಗೇಶ್, ಶ್ರೀನಾಥ್, ತಾರಾ, ಗಣೇಶ್, ರಕ್ಷಿತಾ, ಬಿ. ಸುರೇಶ, ಮಾಳವಿಕಾ ಮೊದಲಾದ ಅನೇಕ ಪ್ರಮುಖರು ಅನಂತಕುಮಾರ್ ಅವರ ಸ್ನೇಹವಲಯದಲ್ಲಿದ್ದರು. ರಾಜಕೀಯ ರಂಗಕ್ಕೆ ಅನೇಕ ಕಲಾವಿದರನ್ನು ಕರೆದುಕೊಂಡು ಹೋದ ಹಿರಿಮೆ ಅನಂತಕುಮಾರ್ ಅವರದಾಗಿತ್ತು. ತಾರಾ ಮತ್ತು ಶ್ರೀನಾಥ್ ಅವರು ಬಿಜೆಪಿಯ ಪರವಾಗಿ ವಿಧಾನ ಪರಿಷತ್ತಿನ ಸದಸ್ಯರಾಗುವುದರಲ್ಲಿ ಅನಂತಕುಮಾರ್ ಅವರ ಪಾತ್ರ ಬಹಳವಾಗಿತ್ತು. ಕನ್ನಡ ಚಿತ್ರರಂಗದ ಖ್ಯಾತ ಸಂಗೀತ ನಿರ್ದೇಶಕ ಹಂಸಲೇಖ ಅವರು ಅನಂತಕುಮಾರ್ ಅವರನ್ನು ಕುರಿತು "ಮಕ್ಕಳಿಗೆ ಅನ್ನವಿಟ್ರಿ, ಪರಿವಾರಕ್ಕೆ ಪ್ರಾಣವಿಟ್ರಿ, ದೆಹಲಿಯ ಕಟ್ಟಾಳುವಾದ್ರಿ, ಕನ್ನಡಕ್ಕೆ ರಾಜಕಾರಣದ ನಿಷ್ಠೆಗೊಂದು ನೆನೆಯುವ ಹೆಸರಾದ್ರಿ' ಎಂದು ಹಾಡಿದ್ದಾರೆ. ◆

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| 465 24/11/24 | ಚಾಮರಾಜಪೇಟೆಯ ಕೃಷ್ಣ ರಾಜೇಂದ್ರ ರಸ್ತೆಯ ಪೋರ್ಟ್ ಹೈಸ್ಕೂಲ್ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಹಸಿರು ಯೋಧರು, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಮೊದಲಾದವರು | ವಿವಿಧ ಜಾತಿಯ 10 ಗಿಡಗಳನ್ನು ನೆಡಲಾಯಿತು. |
| 466 01/12/24 | ಬೆಂಗಳೂರಿನ ವಿಶ್ವವಿದ್ಯಾಲಯ ಬಯೋ ಪಾರ್ಕ್-1 ಎನ್ ಎಸ್ ಎಸ್ ಭವನದ ಹಿಂಭಾಗದ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮೊದಲಾದವರು | ನಾನಾ ಜಾತಿಯ 10 ಗಿಡಗಳನ್ನು ನೆಡಲಾಯಿತು., |
| 467 08/12/24 | ವಿದ್ಯಾಪೀಠ ಕ್ಷೇಮಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಘದ ಕಚೇರಿ ಆವರಣ. | ವಿದ್ಯಾಪೀಠ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಮೊದಲಾದವರು ಭಾಗಿಯಾಗಿದ್ದರು. | ವಿವಿಧ ಜಾತಿಯ 10 ಗಿಡಗಳನ್ನು ನೆಟ್ಟು ಅಲ್ಲಿಯ ಸ್ಥಳವನ್ನು ಸ್ವಚ್ಛ ಮಾಡಲಾಯಿತು. |
| 468 15/12/24 | ಬೆಂಗಳೂರಿನ ಶ್ರೀ ಶಾಂತಾನಂದ ಪ್ರೌಢಶಾಲೆಯ, ಸಿದ್ಧಾರೂಢ ಆಶ್ರಮದ ಆವರಣ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಸಿದ್ಧಾರೂಢ ಮಠದ ಆಡಳಿತಾಧಿಕಾರಿಗಳು, ಶ್ರೀ ವಿಠ್ಠಲ್, ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು, ಮೊದಲಾದವರು | ವಿವಿಧ ಜಾತಿಯ 10 ಗಿಡಗಳನ್ನು ನೆಡಲಾಯಿತು. |

ವ್ಯಕ್ತಿ ವಿಶೇಷ ಮಾಲಿಕೆ

# ‘ಹುಚ್ಚು ಮನಸ್ಸಿನ ಅನಂತಮುಖ‘- ಶಿವರಾಮ ಕಾರಂತರು

- ಕೆ. ಜನಾರ್ದನ ತುಂಗ



ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರಭಾಗದಲ್ಲಿರುವ ಪುಟ್ಟಹಳ್ಳಿ, ಕೋಟ. ಕೋಟವೆನ್ನುವುದು ಆಡಳಿತಾತ್ಮಕವಾಗಿ ನಾಲ್ಕಾರು ಚದರ ಮೈಲುಗಳ ವ್ಯಾಪ್ತಿಯನ್ನು ಹೊಂದಿರುವುದಾದರೂ ಸಾಂಸ್ಕೃತಿಕವಾಗಿ ಕೂಟ ಮಹಾಜಗತ್ತು ಎಂದು ಹದಿನಾಲ್ಕು ಗ್ರಾಮಗಳಿಗೆ ವಿಸ್ತರಿಸಿಕೊಳ್ಳುತ್ತದೆ. ಊರು ಬಿಡುವುದು, ಜಗತ್ತಿಗೆ ತೆರೆದುಕೊಳ್ಳುವುದು, ಹೊಸ ಸಾಹಸಗಳನ್ನು ಮಾಡುವುದು ಈ ಪ್ರದೇಶದ ಜನರಿಗೆ ಅನಿವಾರ್ಯ. ಇಂತಹ ಸಾಹಸೀಪ್ರವೃತ್ತಿಯ ಜನರ ನಡುವೆ ಎದ್ದುಕಾಣುವ ಮೇರುಸದೃಶ ವ್ಯಕ್ತಿ, ಡಾ. ಶಿವರಾಮ ಕಾರಂತರು.

ಕಾರಂತರ ತಂದೆಯ ಹೆಸರು, ಶೇಷ ಕಾರಂತ ಮತ್ತು ತಾಯಿ ಲಕ್ಷ್ಮೀ ಕಾರಂತ. ಕಾರಂತ ಎಂಬುದು ಅವರ ಕುಟುಂಬದ ಹೆಸರು. ತಂದೆತಾಯಿಯರ ಹನ್ನೆರಡು ಮಕ್ಕಳಲ್ಲಿ ಐದನೆಯವರಾಗಿ ಶಿವರಾಮ ಕಾರಂತರು ೧೦/೧೦/೧೯೦೨ರಂದು ಜನಿಸಿದರು. ಕಾರಂತರ ಅಣ್ಣ ರಾಮಕೃಷ್ಣ ಕಾರಂತರು ಮಂಗಳೂರಿನಲ್ಲಿ ವಕೀಲರಾಗಿದ್ದು ಮದರಾಸು ಸರಕಾರದಲ್ಲಿ ಮಂತ್ರಿಯಾಗಿದ್ದರು. ಇನ್ನೊಬ್ಬರು, ಲಕ್ಷ್ಮೀನಾರಾಯಣ ಕಾರಂತರು ಶಿಕ್ಷಣ ಮತ್ತು ಕೃಷಿಕ್ಷೇತ್ರದಲ್ಲಿ ಹೆಸರು ಮಾಡಿದವರು. ವಾಸುದೇವ ಕಾರಂತರು ಧಾರ್ಮಿಕ ಸಾಹಿತ್ಯಕ್ಷೇತ್ರದಲ್ಲಿ ಪರಿಚಿತ ಹೆಸರು.

ಶಿವರಾಮ ಕಾರಂತರ ಪ್ರಾಥಮಿಕ ವಿದ್ಯಾಭ್ಯಾಸ ಕೋಟ ಸರಕಾರಿ ಶಾಲೆಯಲ್ಲಿ ನಡೆಯಿತು. ಮುಂದಿನ ಶಿಕ್ಷಣಕ್ಕಾಗಿ ಅವರು ಕುಂದಾಪುರಕ್ಕೆ ತೆರಳಿದರು. ಅಲ್ಲಿ ಎಂಟುವರ್ಷಗಳ ವಿದ್ಯಾಭ್ಯಾಸ ಮುಗಿಸಿ ಮುಂದಿನ ಓದಿಗಾಗಿ ಮಂಗಳೂರಿಗೆ ತೆರಳಿದರು. ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಓದುತ್ತಿದ್ದಾಗ ಸ್ವಾತಂತ್ರ್ಯ ಚಳುವಳಿಯ ಜ್ವರ ಹತ್ತಿಸಿಕೊಂಡು ಓದಿಗೆ ತಿಲಾಂಜಲಿ ನೀಡಿದರು. ಕಾರ್ನಾಡ್ ಸದಾಶಿವರಾಯರಂತಹ ಹಿರಿಯರ ಜೊತೆಗೆ ಪ್ರತಿಯೊಂದು ಪ್ರಮುಖ ಹೋರಾಟಗಳಲ್ಲಿ ಭಾಗವಹಿಸುವುದರ ಜೊತೆಗೆ ವಿಧವಾವಿವಾಹ, ಅಸ್ಪೃಶ್ಯತಾ ನಿವಾರಣೆ ಮುಂತಾದ ಸಮಾಜಸುಧಾರಣಾ ಕೆಲಸಗಳಲ್ಲಿಯೂ ತೊಡಗಿಕೊಂಡರು. ಖಾದಿ ಪ್ರಚಾರಕ್ಕಾಗಿ ವ್ಯಾಪಕವಾಗಿ ಪ್ರಚಾರ ಮಾಡಿದ್ದಲ್ಲದೆ ಖಾದಿ ಬಟ್ಟೆಯ ಮಾರಾಟಕ್ಕಾಗಿ ಮಳಿಗೆಯನ್ನೂ ತೆರೆದು ಕೈಸುಟ್ಟುಕೊಂಡರು.

ಕಾರಂತರ ಸಾಮಾಜಿಕ ಕೆಲಸಗಳದ್ದೇ ಒಂದು ತೂಕವಾದರೆ ಅವರ ಸೃಜನಶೀಲ ಚಟುವಟಿಕೆಗಳದ್ದೇ ಇನ್ನೊಂದು ತೂಕ. ಅವರ ಸಾಹಿತ್ಯಕ ‘ಸಾಹಸಗಳು‘ ಕುಂದಾಪುರದಲ್ಲಿದ್ದಾಗಲೇ ಪ್ರಾರಂಭವಾಗಿದ್ದವು. ‘ವಸಂತ‘ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಇದೇ ಸಂದರ್ಭದಲ್ಲಿ ತಮ್ಮ ಮೊದಲ ಕಾದಂಬರಿ ‘ವಿಚಿತ್ರಕೂಟ‘ ವನ್ನೂ ಬರೆದರು. ತಮ್ಮ ಬರವಣಿಗೆಯ ಬಲದಿಂದಲೇ ಜೀವನ ನಿರ್ವಹಿಸಿದ ಏಕೈಕ ವ್ಯಕ್ತಿ, ಶಿವರಾಮ ಕಾರಂತರೆನ್ನಬಹುದು. ತಮ್ಮ ಜೀವಿತಾವಧಿಯಲ್ಲಿ ಅವರು ಬರೆದ ಕಾದಂಬರಿಗಳು(೪೭), ಕವನ ಸಂಕಲನಗಳು(೨), ನಾಟಕ (೨೯), ಸಣ್ಣಕತೆಗಳ ಸಂಕಲನ (೪), ಹರಟೆ (೬), ಪ್ರವಾಸ ಕಥನ (೬), ಆತ್ಮಕಥೆ (೫ -ಹುಚ್ಚುಮನಸ್ಸಿನ ಹತ್ತು ಮುಖಗಳು, ಸ್ಮೃತಿ ಪಟಲದಿಂದ ೧, ೨, ೩, ಅಳಿದುಳಿದ ನೆನಪುಗಳು), ಜೀವನ ಚರಿತ್ರೆ (೧), ಕಲೆ (೯), ವಿಜ್ಞಾನ (೮), ಇತರ (೭), ಸಂಪಾದಿತ (೩), ವಿಶ್ವಕೋಶ (೯), ನಿಘಂಟು (೧), ಅನುವಾದ (೧೫), ಮಕ್ಕಳ ಸಾಹಿತ್ಯ (೧೯೫), ಮಕ್ಕಳ ಶಿಕ್ಷಣ (೨೮), ವಯಸ್ಕರ ಶಿಕ್ಷಣ (೮), ಇಂಗ್ಲೀಷ್ ಬರಹಗಳು (೫) ಹೀಗೆ ಒಟ್ಟು ೪೨೭ ಪುಸ್ತಕಗಳನ್ನು ಪಟ್ಟಿ ಮಾಡಿದ್ದಾರೆ.

ಮಂಗಳೂರಿನಲ್ಲಿದ್ದಾಗ ಕಾರಂತರು ವೃತ್ತಿ ನಾಟಕ ಕಂಪೆನಿಗಳಿಗೂ ನಾಟಕ ಬರೆದುಕೊಟ್ಟು ಆಡಿಸಿದ್ದುಂಟು. ನೃತ್ಯ ಶಿಕ್ಷಕರಾಗಿಯೂ ಕೆಲಸ ಮಾಡಿದ್ದುಂಟು. ತನ್ನ ಶಿಷ್ಯೆಯಾಗಿದ್ದ ಲೀಲಾ ಆಳ್ವರನ್ನು ಬಾಳ ಸಂಗಾತಿಯಾಗಿ ಸ್ವೀಕರಿಸುವಾಗ ಅವರಿಗೆ ೩೪ ವರ್ಷ ವಯಸ್ಸು. ಅಲ್ಲಿಂದ ಮುಂದೆ ಅವರು ಪುತ್ತೂರಿನ ಸಮೀಪ ಬಾಲವನವನ್ನು ಸ್ಥಾಪಿಸಿ ಮಕ್ಕಳ ಶಿಕ್ಷಣದಲ್ಲಿ ಸಾಕಷ್ಟು ಪ್ರಯೋಗಗಳನ್ನು ಮಾಡಿದರು. ೧೯೭೪ರಲ್ಲಿ ತಮ್ಮ ಹುಟ್ಟೂರಿಗೆ ಸಮೀಪದ ಸಾಲಿಗ್ರಾಮದಲ್ಲಿ ಬಂದು ನೆಲೆಸಿ ೦೯/೧೨/೧೯೯೭ರಂದು ಮಣಿಪಾಲದ ಆಸ್ಪತ್ರೆಯಲ್ಲಿ ಕೊನೆಯುಸಿರು ಎಳೆಯುವವರೆಗೂ ಸಾಲಿಗ್ರಾಮದಲ್ಲಿಯೇ ಇದ್ದರು.

ಒಂದು ಅಂಕಣದ ವ್ಯಾಪ್ತಿಯಲ್ಲಿ ಕಾರಂತರ ವ್ಯಕ್ತಿತ್ವದ ಅನಂತಮುಖಗಳನ್ನು ಹಿಡಿದಿಡುವುದು ಕಷ್ಟ. ಹೀಗಾಗಿ, ಅವರ ಜೀವನದ ಕೆಲವು ಪ್ರಮುಖ ಘಟನೆಗಳ ಬಗ್ಗೆ ಮಾತ್ರ ಗಮನ ಹರಿಸೋಣ.

ಕಾರಂತರು ಪುತ್ತೂರಿನಲ್ಲಿ ಹರ್ಷ ಮುದ್ರಣಾಲಯವನ್ನು ತೆರೆದು ತಮ್ಮ ಪುಸ್ತಕಗಳನ್ನು ತಾವೇ ಮುದ್ರಿಸತೊಡಗಿದರು. ಮುದ್ರಕರು, ಪ್ರಕಾಶಕರು, ವಿತರಕರು, ಕೊನೆಗೆ ಪುಸ್ತಕದ ಮುಖಪುಟ, ಒಳಪುಟಗಳ ಚಿತ್ರಗಳನ್ನೂ ಅವರೇ ಬರೆದರು. ಮಕ್ಕಳ ಮತ್ತು ವಯಸ್ಕರ ಶಿಕ್ಷಣಕ್ಕಾಗಿ ಪಠ್ಯಪುಸ್ತಕಗಳನ್ನು ತಯಾರಿಸಿದರು. ಏಕಾಂಗಿಯಾಗಿ ಅರ್ಥಕೋಶವನ್ನು ರಚಿಸಿ ಪ್ರಕಟಿಸಿದರು. ಉದಯವಾಣಿ ಪತ್ರಿಕೆಯಲ್ಲಿ ಅವರು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದ “ಬಾಲವನದಲ್ಲಿ ಕಾರಂತಜ್ಜ” ಎಂಬ ಅಂಕಣ ಜನಪ್ರಿಯವಾಗಿತ್ತು. ಕನ್ನಡದ ಮೊದಲ ಚಲನಚಿತ್ರ ಎನ್ನಬಹುದಾದ “ಡೊಮಿಂಗೋ” ಎಂಬ ಮೂಕಿ ಚಿತ್ರವನ್ನು ೧೯೩೦ರಲ್ಲಿ ನಿರ್ಮಾಣ ಮಾಡಿದರು. ಅನಂತರ ೧೯೩೧ರಲ್ಲಿ ಭೂತರಾಜ್ಯ ಎಂಬ ಚಲನಚಿತ್ರವನ್ನೂ ನಿರ್ಮಾಣ ಮಾಡಿದರು. ನಂತರದ ವರ್ಷಗಳಲ್ಲಿ ಅವರ ಕಾದಂಬರಿಗಳನ್ನು ಆಧರಿಸಿದ ಚೋಮನ ದುಡಿ ಮತ್ತು ಬೆಟ್ಟದ ಜೀವ ಚಲನಚಿತ್ರಗಳು ಪ್ರಶಸ್ತಿ ಗಳಿಸಿದುದರ ಜೊತೆಗೆ ಕಾರಂತರಿಗೂ “ಅತ್ಯುತ್ತಮ ಕಥೆ” ಪ್ರಶಸ್ತಿ ಲಭ್ಯವಾಯಿತು.

ಅವರು ಯಕ್ಷಗಾನ ಕ್ಷೇತ್ರದಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದರು. ವೇಷಭೂಷಣಗಳಲ್ಲಿ ಸರಳತೆ, ಹಿಮ್ಮೇಳದಲ್ಲಿ ಸ್ಯಾಕ್ಸೋಫೋನ್ ಬಳಕೆ ಮುಂತಾದುವು ಅವರ ಕೆಲವು ಪ್ರಯೋಗಗಳು. ಪ್ರಾಯೋಗಿಕವಾದ ಯಕ್ಷಗಾನ ಬ್ಯಾಲೆಯನ್ನು ವಿದೇಶಗಳಿಗೆ ಕೊಂಡೊಯ್ದು ಅಲ್ಲಿ ಯಕ್ಷಗಾನವನ್ನು ಪರಿಚಯಿಸಿದರು.

ಪರಿಸರಪ್ರೇಮಿಯಾಗಿ ಕೆನರಾ ಲೋಕಸಭಾ ಕ್ಷೇತ್ರದಿಂದ ಚುನಾವಣೆ ಎದುರಿಸಿದರು. ಪಶ್ಚಿಮಘಟ್ಟದ ಉಳಿವಿಗಾಗಿ ನಡೆದ ಹೋರಾಟಗಳನ್ನು ಬೆಂಬಲಿಸಿದರು. ಇಂದಿರಾಗಾಂಧಿಯವರು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದಾಗ ಅದನ್ನು ಪ್ರತಿಭಟಿಸಿ ಸರಕಾರ ತಮಗೆ ನೀಡಿದ್ದ ಪದ್ಮಭೂಷಣ ಪ್ರಶಸ್ತಿಯನ್ನು ಹಿಂದಿರುಗಿಸಿದರು. ನೃತ್ಯ, ಚಿತ್ರಕಲೆ, ಶಿಲ್ಪಶಾಸ್ತ್ರ, ಸಂಗೀತ, ನಾಟಕ, ಸಾಹಿತ್ಯ, ಇತಿಹಾಸ, ಪ್ರವಾಸ, ಪತ್ರಿಕೆಗಳು, ಪರಿಸರ, ರಾಜಕೀಯ – ಹೀಗೆ ಕಾರಂತರು ಕೈಯಾಡಿಸದ ಕ್ಷೇತ್ರವೇ ಇಲ್ಲ

ಕಾರಂತರು ನಾಸ್ತಿಕರು ಎಂದು ಅನೇಕರು ಹೇಳುತ್ತಾರೆ. ಆದರೆ ಅವರು ನಾಸ್ತಿಕರಾಗಿರಲಿಲ್ಲ. ನನಗೆ ಗೊತ್ತಿರದ ದೇವರ ಮೇಲೆ ನಾನು ಅವಲಂಬಿತನಾಗಬೇಕಿಲ್ಲ ಎಂಬುದು ಅವರ ನಿಲುವು. ಅವರಿಗೆ “ಬಾಳ್ವೆಯೇ ಬೆಳಕು”. ಯಾರ ಪ್ರಭಾವಕ್ಕೂ ಒಳಗಾಗದ ಕಾರಂತರು ತಮ್ಮ ಪರಿಸರದಿಂದ ಮತ್ತು ಮುಗ್ಧಜನರ ಬಾಳುವೆಯಿಂದ ಪ್ರಭಾವಿತರಾಗಿರುವುದು ಅವರ ಸಾಹಿತ್ಯವನ್ನು ಗಮನಿಸಿದರೆ ತಿಳಿಯುತ್ತದೆ.

ಕಾರಂತರ ಸಾಧನೆಗಳ ಪಟ್ಟಿ ಮಾಡುವುದು ಹೇಗೆ ಕಷ್ಟವೋ ಅವರಿಗೆ ದೊರೆತ ಪ್ರಶಸ್ತಿಗಳನ್ನು ಪಟ್ಟಿ ಮಾಡುವುದೂ ಅಷ್ಟೇ ಕಷ್ಟ. ಪದ್ಮಭೂಷಣ, ಎಂಟು ಗೌರವ ಡಾಕ್ಟರೇಟುಗಳು, ಮೈಸೂರಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ನಾವು ಪಟ್ಟಿ ಮಾಡಬಹುದಾದ ಕೆಲವು ಪ್ರಶಸ್ತಿಗಳು. ೦೯/೧೨/೧೯೯೭ರಂದು ನಿಧನರಾದ ಕಾರಂತರ ಅಂತ್ಯಕ್ರಿಯೆ ಸಕಲ ಸರ್ಕಾರಿ ಮರ್ಯಾದೆಗಳೊಂದಿಗೆ ಅವರು ಜನಿಸಿದ ಮಣ್ಣಿನಲ್ಲಿಯೇ ನಡೆಯಿತು. ರಾಜ್ಯ ಸರಕಾರವೂ ಎರಡು ದಿನಗಳ ಶೋಕಾಚರಣೆಯನ್ನು ಘೋಷಿಸಿತ್ತು.

ಮರಳಿ ಮಣ್ಣಿಗೆ ಸೇರಿದ ಕಾರಂತರ ನೆನಪಿನಲ್ಲಿ ಕೋಟದಲ್ಲಿ “ಕಾರಂತ ಥೀಮ್ ಪಾರ್ಕ್” ಸ್ಥಾಪನೆಯಾಗಿದೆ. ಅವರ ಹೆಸರಿನಲ್ಲಿ ಹುಟ್ಟೂರ ಪ್ರಶಸ್ತಿಯನ್ನು ಸಾಧಕರಿಗೆ ನೀಡಲಾಗುತ್ತಿದೆ. ಕಾರಂತರು ಬಳಸಿದ ಕಾರು, ಅವರ ಊರುಗೋಲು, ಕನ್ನಡಕ, ಲೇಖನಿ ಮತ್ತಿತರ ಸ್ಮರಣಿಕೆಗಳನ್ನು ಸಾಲಿಗ್ರಾಮದ “ಕಾರಂತ ಸ್ಮೃತಿ ಚಿತ್ರಶಾಲೆ” ಸಂಗ್ರಹಾಲಯದಲ್ಲಿರಿಸಲಾಗಿದೆ. “ಸ್ಮೃತಿ ಪಟಲದಿಂದ” ಎಂಬ ಮೂರು ಸಂಪುಟಗಳ ಕಾರಂತರ ಜೀವನ ಚರಿತ್ರೆಯನ್ನು ಓದುವಂತೆ ಎಳೆಯರನ್ನು ಪ್ರೋತ್ಸಾಹಿಸುವುದು ಆರೋಗ್ಯಕರ ಸಮಾಜದ ನಿರ್ಮಾಣದ ದೃಷ್ಟಿಯಿಂದ ಶಿಕ್ಷಕರ, ಪೋಷಕರ ಕರ್ತವ್ಯವಾಗಬೇಕು. ◆

# “ಹುಬ್ಬಳ್ಳಿಯಲ್ಲಿ ಗ್ರಾಮ ಚೇತನ”



ಅನಂತಕುಮಾರ್ ಪ್ರತಿಷ್ಠಾನವು ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಗ್ರಾಮ ಪಂಚಾಯತಿ ಸದಸ್ಯೆಯರು ಹಾಗೂ ಗ್ರಾಮೀಣ ಭಾಗದ ಮಹಿಳೆಯರಿಗಾಗಿ ನೇತೃತ್ವ ವಿಕಸನ ಶಿಬಿರವನ್ನು ಏರ್ಪಡಿಸಿತ್ತು. ನವೆಂಬರ್ ತಿಂಗಳ 23 ರಂದು ಜರುಗಿದ “ಗ್ರಾಮ ಚೇತನ” ಎಂಬ ಹೆಸರಿನ ಈ ಶಿಬಿರದಲ್ಲಿ ಹುಬ್ಬಳ್ಳಿ, ಧಾರವಾಡ, ಶಿಗ್ಗಾವಿ, ಕುಂದಗೋಳ ತಾಲೂಕಿನ ಭಂಡಿವಾಡ, ಹನುಮರಹಳ್ಳಿ, ಕೋಳಿವಾಡ ಗ್ರಾಮಗಳ ಪಂಚಾಯತಿ ಸದಸ್ಯೆಯರೂ ಸೇರಿದಂತೆ ಗ್ರಾಮೀಣ ಭಾಗದ 31 ಮಹಿಳೆಯರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಶ್ರೀಮತಿ ಕೀರ್ತಿವತಿಯವರು ಮಹಿಳಾ ನಾಯಕತ್ವದ ಬಗ್ಗೆ ಮಾತನಾಡುತ್ತಾ ವಾಸ್ತವದಲ್ಲಿ ಹೆಣ್ಣು ಸಮಾಜದ ಎಲ್ಲ ಸ್ಥರಗಳಲ್ಲೂ ನಾಯಕತ್ವ ವಹಿಸುವ ಚೈತನ್ಯ ಇರುವವಳು. ಕುಟುಂಬದ ಏಳಿಗೆಯಲ್ಲಿ ಹೆಣ್ಣಿನ ಪಾತ್ರ ಬಹಳ ಪ್ರಮುಖವಾದದ್ದು ಎಂದರು.

ಇನ್ನೋರ್ವ ಸಂಪನ್ಮೂಲ ವ್ಯಕ್ತಿ, ಶ್ರೀ ಜಗದೀಶ್ ಬಾಪಟ್ ಅವರು ಗ್ರಾಮೀಣ ಮಹಿಳೆಯರು ಆರ್ಥಿಕವಾಗಿ ಸದೃಢವಾಗಲು ಸ್ವ-ಉದ್ಯೋಗಿಗಳಾಗಬೇಕು. ಇದಕ್ಕೆ ಗ್ರಾಮೀಣ ಪರಿಸರದಲ್ಲಿಯೇ ಸುಲಭವಾಗಿ ದೊರೆಯುವ ಅವಕಾಶಗಳನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುವುದು ಅವರ ಕೈಯಲ್ಲೇ ಇದೆ. ಈ ದೆಸೆಯಲ್ಲಿ ಕಡಿಮೆ ಸ್ಥಳಾವಕಾಶದಲ್ಲಿಯೇ ಮಾಡಬಹುದಾದ ಅಣಬೆ ಬೇಸಾಯ ಮತ್ತು ಅದರ ಮಾರಾಟಗಾರಿಕೆ, ರಾಸಾಯನಿಕ ಮುಕ್ತ ಎರೆಹುಳು ಗೊಬ್ಬರ ತಯಾರಿಕೆ ಮತ್ತು ಅದರ ಉಪಯೋಗ ಹಾಗೂ ಇನ್ನಿತರ ಅನೇಕ ವಿಷಯಗಳ ಕುರಿತು ಮಾತನಾಡಿದರು.

ಕಾರ್ಯಕ್ರಮದ ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದ ಸಂಚಾಲಕರಾದ ಶ್ರೀಮತಿ ಸ್ವಾತಿ ಪಟ್ಟೇದ್, ಶ್ರೀಮತಿ ವೀಣಾ ಅಠವಲೆ, ಶ್ರೀ ಲಕ್ಷಣ್ ರಾವ್ ಓಕ್ ಮೊದಲಾದವರು ಉಪಸ್ಥಿತರಿದ್ದರು.

# ತಿಂಗಳ ವರದಿ

## (15 ನವೆಂಬರ್ - 15 ಡಿಸೆಂಬರ್ 2024)

**‘ದಕ್ಷಿಣ ಗಂಗೆ’ ವೃಷಭಾವತಿ ನದಿಯ ಪುನಶ್ಚೇತನ**

ಬೆಂಗಳೂರಿನ ಜೀವಸೆಲೆಯಾಗಿದ್ದ ‘ವೃಷಭಾವತಿ ನದಿ’ ಯ ಮೂಲದ ಸ್ಥಾನವನ್ನು ದಕ್ಷಿಣ ಗಂಗೆ ಎಂದು ಅದಮ್ಯ ಚೇತನ ಸಂಸ್ಥೆ ಕಾಪಾಡಿಕೊಂಡು ಬಂದಿದೆ. ಈ ನಿಸ್ವಾರ್ಥ ಸೇವೆಯನ್ನು ಖ್ಯಾತ ಯೂಟ್ಯೂಬರ್ ಶ್ರೀ ಧರ್ಮೇಂದ್ರ ಅವರು ಪ್ರಶಂಸಿಸುತ್ತ, “ಇದು ನಾಡಿನ ಪರಿಸರ ಪ್ರೇಮಿಗಳಿಗೆ ಮಾದರಿಯಾಗಿದೆ” ಎಂದು ಹೇಳಿದ್ದಾರೆ. ಅದಮ್ಯ ಚೇತನವು ಈ ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದ್ದು ಇದನ್ನು ಒಂದು ಲಕ್ಷಕ್ಕೂ ಹೆಚ್ಚಿನ ಜನ ವೀಕ್ಷಿಸಿ ಅದಮ್ಯ ಚೇತನದ ಕಾರ್ಯವನ್ನು ಶ್ಲಾಘಿಸಿದ್ದಾರೆ. “ಅದಮ್ಯ ಚೇತನದ ಬದಿಯಲ್ಲಿಯೇ ಗವಿಗಂಗಾಧರೇಶ್ವರ ಇನ್ನೊಂದೆಡೆ ಅನ್ನಪೂರ್ಣೇಶ್ವರಿ, ಮಧ್ಯದಲ್ಲಿ ಗಂಗೆ” ಇದೆ ಇದಕ್ಕಿಂತ ಸೌಭಾಗ್ಯ ಬೇಕೇ?” ಎಂದು ಅನಂತಕುಮಾರರು ಸದಾ ಹೇಳುತ್ತಿದ್ದರು. ಅದಮ್ಯ ಚೇತನ ಪ್ರಾರಂಭಿಸುವ ಮುನ್ನ ವೃಷಭಾವತಿಯ ನೀರು ವ್ಯರ್ಥವಾಗಿ ಮೋರಿಗೆ ಹರಿದು ಹೋಗುತ್ತಿತ್ತು. ನಂತರ ಅದರ ಜಲಮೂಲಗಳ ಪುನಶ್ಚೇತನವನ್ನು ಕೈಗೊಂಡು, ಶುದ್ಧ ಆಹಾರದ ತಯಾರಿಕೆಗೆ ನೀರಿನ ಮೂಲವನ್ನಾಗಿ ಪರಿವರ್ತಿಸಿಕೊಳ್ಳಲಾಗಿದ್ದು, ಈ ನೀರನ್ನು ಅದಮ್ಯ ಚೇತನವು ರುಚಿ-ಶುಚಿ ಅಡುಗೆಗೆ ಬಳಸಿಕೊಳ್ಳುತ್ತಿದೆ.

**ಅನಂತ ಪ್ರೇರಣಾ ಕೇಂದ್ರಕ್ಕೆ ಮಕ್ಕಳ ಭೇಟಿ:** ಬೆಂಗಳೂರಿನ ಆರ್. ವಿ. ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು, ವಿಜಯ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು, ಶಿಕ್ಷಕರು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ ಶ್ರೀ ಅನಂತಕುಮಾರ್ ಅವರ ಕುರಿತ ಚಿತ್ರಪ್ರದರ್ಶಿನಿ ಹಾಗೂ ಕಿರುಚಿತ್ರವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಏಕಬಳಕೆಯ ಪ್ಲಾಸ್ಟಿಕ್ ವಸ್ತುಗಳ ಬಳಕೆಯಿಂದ ಪರಿಸರದ ಮೇಲೆ ಉಂಟಾಗುವ ಹಾನಿಯ ಬಗ್ಗೆಯೂ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲಾಯಿತು.

**ಹಸಿರು ಭಾನುವಾರ :** ಡಿಸೆಂಬರ್ 01 ರಂದು ಅದಮ್ಯ ಚೇತನದ 466ನೇ ಹಸಿರು ಭಾನುವಾರದ ಕಾರ್ಯಕ್ರಮವು ಬೆಂಗಳೂರು ವಿಶ್ವವಿದ್ಯಾಲಯ ಕ್ಯಾಂಪಸ್ ಬಯೋ-ಪಾರ್ಕ್-1, ಎನ್ಎಸ್ಎಸ್ ಭವನದ ಹಿಂಭಾಗದ ಆವರಣದಲ್ಲಿ ಯಶಸ್ವಿಯಾಗಿ ಜರುಗಿತು. ಈ ಕಾರ್ಯಕ್ರಮದಲ್ಲಿ ವಿವಿಧ ರಾಜ್ಯಗಳಿಂದ 250ಕ್ಕೂ ಹೆಚ್ಚು NSS ವಿದ್ಯಾರ್ಥಿಗಳು, CRPF, BSF ಹಾಗೂ ಮಹಾರಾಷ್ಟ್ರ, ಜಾರ್ಖಂಡ್ ರಾಜ್ಯದ ಗಿರಿಜನ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಪರಿಸರಸ್ನೇಹಿ ಚಟುವಟಿಕೆಗಳನ್ನು ಹೇಗೆ ಅಳವಡಿಸಿಕೊಳ್ಳಬೇಕು ಎಂಬುದರ ಕುರಿತು ವಿವರವಾಗಿ ಮಾಹಿತಿ ನೀಡಿದರು. ಅಲ್ಲದೆ, ಸಮಾಜದಲ್ಲಿ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ತನ್ನ ಪಾತ್ರವನ್ನು ಹೇಗೆ ವಹಿಸಬೇಕು ಎಂಬುದನ್ನು ವಿವರವಾಗಿ ನಿರೂಪಿಸಿದರು. ಈ ಕಾರ್ಯಕ್ರಮವು ಪರಿಸರ ಅರಿವು ಮತ್ತು ಸಾಮಾಜಿಕ ಕಳಕಳಿಯ ಮಹತ್ವವನ್ನು ಪ್ರತಿಪಾದಿಸಿ, ಎಲ್ಲರಿಗೂ ಪ್ರೇರಣೆಯಾಯಿತು.

**ಶ್ರದ್ಧೆಯ ಶಿಲ್ಪ;** ಮೈಸೂರು ಆಕಾಶವಾಣಿಯಿಂದ ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯ ಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್ ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ.

ಅನಂತಪಥ

Editorial Advisory Committee: Tejaswini Ananthkumar / Gopal T.S / K. Janardhana Thunga
Layout: Ananthakumar Pratishthana Assistance: Sanjay R / Trivikram Joshi / G P Nagarajan
Inputs: Poornaprazna / ACF / AKP / GM Inamdar
Photographs: Gopal TS / Kengeri Chakrapani/ Internet Sources / AKP / ACF
Acknowledgements: Sri Pradeep Oak / Y V Sharad / Mahantesh Biradar/ T G Srinidhi
Printed at: Rashtrothana Mudranalaya, Chamarajpet, Bengaluru
Published by: Tejaswini Ananthkumar

For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

# ಅನಂತ ಚಿತ್ರಸಂಪುಟ

**ಪಿಯುಸಿ ವಿದ್ಯಾರ್ಥಿಯಾಗಿದ್ದಾಗಲೇ ತುರ್ತು ಪರಿಸ್ಥಿತಿಯನ್ನು ವಿರೋಧಿಸಿ ಸತ್ಯಾಗ್ರಹ ನಡೆಸಿ ಸೆರೆವಾಸ ಅನುಭವಿಸಿದ್ದ ಅನಂತಕುಮಾರ್ ವಿದ್ಯಾರ್ಥಿ ಪರಿಷತ್ತಿನ ನಾಯಕರಾಗಿ ಅನೇಕ ಆಂದೋಲನಗಳ ಯಶಸ್ಸಿಗೆ ಕಾರಣರಾದರು.**


















# ಅದಮ್ಯ ಸೇವಾ

## ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಖ್ಯಾತ ವಿದ್ವಾಂಸರಾದ ಶ್ರೀ ಶತಾವಧಾನಿ ಡಾ. ಗಣೇಶ್ ಮತ್ತು ಡಾ. ಕರುಣಾ  ಅವರಿಗೆ ಅದಮ್ಯ ಚೇತನದ ಅಡುಗೆ ಮನೆಯ ಕಾರ್ಯವಿಧಾನವನ್ನು ವಿವರಿಸುತ್ತಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ಶಿಕ್ಷಣತಜ್ಞ ಡಾ.ಎಚ್.ಎಸ್ ನಾಗರಾಜ್ ಮತ್ತು ಲೆಕ್ಕಪರಿಶೋಧಕರಾದ ಶ್ರೀ ನರಸಿಂಹಮೂರ್ತಿ ಅವರು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭ



ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಡಿಸೆಂಬರ್ 11ರಂದು ಗೀತಾ ಜಯಂತಿಯಯನ್ನು ಆಚರಿಸಿಲಾಯಿತು.




ಹುಬ್ಬಳ್ಳಿಯ ಶ್ರೀ ಈಶ್ವರ ದೇವಸ್ಥಾನ ಆವರಣದಲ್ಲಿ ಅದಮ್ಯ ಚೇತನದ ನಿತ್ಯ ಅನ್ನದಾನ




ಜೋಧಪುರದ ಮಹಾತ್ಮ ಗಾಂಧಿಜೀ ಆಸ್ಪತ್ರೆಯ ಆವರಣದಲ್ಲಿ ನಿತ್ಯ ಅನ್ನದಾನ



2024  ಡಿಸೆಂಬರ್ 01, ರಂದು ಬೆಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ  466ನೇ ಹಸಿರು ಭಾನುವಾರ ಕಾರ್ಯಕ್ರಮ




ಬೆಂಗಳೂರಿನ ವಿಜಯ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಅನ್ನಪೂರ್ಣ ಅಡುಗೆ ಮನೆಗೆ ಭೇಟಿ ನೀಡಿ, ಶೂನ್ಯ ತ್ಯಾಜ್ಯ ಅಡುಗೆ ಮನೆಯನ್ನು ವೀಕ್ಷಿಸಿದರು.